ದೆಹಲಿ ಕರ್ನಾಟಕ ಸಂಘದ

# ಅಭಿಮತ

ಫೆಬ್ರವರಿ–2017
ಬೆಲೆ ರೂ. 1




## ದೆಹಲಿಯ ರಾಜಪಥದಲ್ಲಿ ಕರ್ನಾಟಕ ಜಾನಪದ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 27 ಸಂಚಿಕೆ 5
ಫೆಬ್ರವರಿ 2017, ಬೆಲೆ ರೂ. 1

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 9958807225
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ಎಸ್. ಪರಮೇಶ್ 9015332380
ತ್ಯಾಗೇಶ್ ಮೂರ್ತಿ 9868393961

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

## ನೇರ ಮಾತು

ಕರ್ನಾಟಕ ನೆಲ, ಜಲ, ಭಾಷೆ ಅಥವಾ ನಾಡಿನ ರಾಜಕೀಯ ಸಮಸ್ಯೆಗಳು ಬಂದಾಗ ಕನ್ನಡಿಗರು ಪ್ರಾಂತೀಯವಾಗಿ ತಮ್ಮ ಪ್ರತಿಭಟನೆಗಳನ್ನು ನಡೆಸಿದ್ದಾರೆಯೇ ಹೊರತು ಎಂದೂ ಒಕ್ಕೊರಲಿನ ಹೋರಾಟ ಮಾಡಿದ್ದೇ ಇಲ್ಲ. ಭಾಷಾಭಿಮಾನದ ಕುರಿತು, ರಾಜ್ಯದ ಸಮಸ್ಯೆಯ ಕುರಿತು ಎಲ್ಲ ಜನರೂ, ಎಲ್ಲಾ ರಾಜಕೀಯ ಪಕ್ಷದವರು ಒಟ್ಟಾಗಿ ಹೋರಾಡುವುದನ್ನು ಪಕ್ಕದ ತಮಿಳರಿಂದ ನಾವು ಕಲಿತುಕೊಳ್ಳಬೇಕು ಎಂದು ಪದೇಪದೆ ಹೇಳುತ್ತಿದ್ದೇವೆ. ಆದರೆ ಎಂದೂ ಒಂದಾಗಿ ಹೋರಾಡಲಿಲ್ಲ. ಇತ್ತೀಚೆಗೆ ನಡೆದ ಜಲ್ಲಿಕಟ್ಟು ಪರವಾದ ತಮಿಳರ ಜನಾಂದೋಳನಕ್ಕೆ ಸರಕಾರಗಳು ತಲೆಬಾಗಿದವು. ಸುಪ್ರೀಂಕೋರ್ಟಿನ ತೀರ್ಮಾನವನ್ನು ಬದಲಿಸುವ ಸಾಮರ್ಥ್ಯ ಒಂದು ಭಾಷೆಗೆ, ಒಂದು ಸಂಸ್ಕೃತಿಗೆ ಇದೆ ಎಂದು ತೋರಿಸಿಕೊಟ್ಟರು. ಆದರೆ ಜಲ್ಲಿಕಟ್ಟು ಕುರಿತು ತಮಿಳರು ಹೋರಾಟ ಮಾಡಿದ ಸಂಸ್ಕೃತಿ ಎಷ್ಟರಮಟ್ಟಿಗೆ ಸರಿ ಎನ್ನುವುದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚರ್ಚಿಸಬೇಕಾದ ವಿಷಯವಾಗಿದೆ.

ಜಲ್ಲಿಕಟ್ಟು ಹೋರಾಟದಿಂದ ಕನ್ನಡಿಗರು ಎಚ್ಚೆತ್ತುಕೊಂಡಿದ್ದಾರೆ. ಜಲ್ಲಿಕಟ್ಟಿಗಿಂತಲೂ ಹೆಚ್ಚು ಶಾಂತಿಯುತವಾಗಿ ಕರ್ನಾಟಕದ ಕರಾವಳಿ ಭಾಗದಲ್ಲಿ ನಡೆಯುವ ಕೋಣಗಳ ಓಟದ ಕಂಬಳ ನಿಷೇಧಕ್ಕೆ ಕರ್ನಾಟಕದ ಮೂಲೆ, ಮೂಲೆಗಳಲ್ಲಿ ಪ್ರತಿಭಟನೆಗಳು ಒಕ್ಕೊರಲಿನಿಂದ ಪಕ್ಷರಹಿತವಾಗಿ ನಡೆದವು. ಇದು ಸರ್ಕಾರವನ್ನು ತಲುಪುವಲ್ಲಿ ಯಶಸ್ವಿಯಾಯಿತು. ಈ ರೀತಿಯ ಕನ್ನಡಿಗರ ಹೋರಾಟ ನಾಡಿನ ಎಲ್ಲಾ ಸಮಸ್ಯೆಗಳಿಗೂ ನಡೆದಾಗ ಕರ್ನಾಟಕದ, ಕನ್ನಡಿಗರ, ಕನ್ನಡದ ರಕ್ಷಣೆ ಮತ್ತು ಬೆಳವಣಿಗೆ ಸಾಧ್ಯ.

ಹೊಸ ವರುಷದ ಆರಂಭದಲ್ಲಿಯೇ ದೆಹಲಿ ಕರ್ನಾಟಕ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ನಡೆಸಲಾಗಿದೆ. ನಮ್ಮ ಕಾರ್ಯಕಾರಿ ಸಮಿತಿಯ ಮುಂದಿನ ಉಳಿದ ಅವಧಿಯ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ನಡೆಸುವ ಪ್ರಯತ್ನಗಳು ಮುಂದುವರಿಯಲಿವೆ. ಸಂಘದ ಆಡಳಿತವನ್ನು ಮುನ್ನಡೆಸಲು ಪ್ರಜಾಸತ್ತಾತ್ಮಕವಾಗಿ ಹೊಸ ಕಾರ್ಯಕಾರಿ ಸಮಿತಿಯನ್ನು ಆಯ್ಕೆಮಾಡಲು ಮುಂಬರುವ ಚುನಾವಣೆಯನ್ನು ಇನ್ನೂ ಪಾರದರ್ಶಕ ಮತ್ತು ವ್ಯವಸ್ಥಿತವಾಗಿ ನಡೆಸಲು ಎಲ್ಲಾ ಸದಸ್ಯರು ಸಹಕರಿಸಬೇಕಾಗಿದೆ.

ಈ ವರ್ಷದ ವಾರ್ಷಿಕ ಮಹಾಸಭೆಯ ಕಲಾಪ ತುಂಬಾ ಶಾಂತಿಯುತವಾಗಿ ಮತ್ತು ಅರ್ಥಪೂರ್ಣ ಚರ್ಚೆಯ ಜೊತೆಗೆ ಹಲವು ವಿಷಯಗಳ ಬಗ್ಗೆ ಉತ್ತಮ ಸಲಹೆಗಳನ್ನು ಪಾಲ್ಗೊಂಡ ಸದಸ್ಯರು ನೀಡಿದ್ದಾರೆ. ಅವರೆಲ್ಲರಿಗೂ ಕೃತಜ್ಞತೆಗಳು. ಸಂಘದ ಅಧ್ಯಕ್ಷನಾಗಿ ನಾನು ಪ್ರತಿ ಭಾನುವಾರ ಸಾಮಾನ್ಯವಾಗಿ ಸಂಘದ ಕಚೇರಿಯಲ್ಲಿ ಲಭ್ಯ ಇರುತ್ತೇನೆ. ಸಂಘದ ಆಗುಹೋಗುಗಳ ಬಗ್ಗೆ ತಾವೆಲ್ಲಾ ಬಂದು ಮುಕ್ತವಾಗಿ ಚರ್ಚಿಸಬಹುದಾಗಿದೆ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಅಭಿಮತ ರಸಪ್ರಶ್ನೆ

1. ಖ್ಯಾತ ನಿರ್ದೇಶಕ ಟಿ.ಎಸ್. ನಾಗಾಭರಣ ಅವರ ಇತ್ತೀಚೆಗೆ ತೆರೆ ಕಂಡಿರುವ ಹೊಸ ಚಲನಚಿತ್ರ ಯಾವುದು ?
2. ಈ ಬಾರಿಯ ದೆಹಲಿ ಕರ್ನಾಟಕ ಸಂಘ ಕನ್ನಡ ಭಾರತಿ ರಂಗ ಪ್ರಶಸ್ತಿ ಪಡೆದವರು ಯಾರು? ಮತ್ತು ಅವರು ಅಭಿನಯಿಸಿದ ಪ್ರಥಮ ಚಲನಚಿತ್ರ ಯಾವುದು?
3. ಡಾ. ಶಿವರಾಮ ಕಾರಂತ ಪ್ರಶಸ್ತಿ ಪಡೆದ ಸಂಸ್ಥೆ ಯಾವುದು? ಮತ್ತು ಪ್ರಶಸ್ತಿ ಯಾವ ವಿಭಾಗಕ್ಕೆ ಬಂದಿದೆ?
4. ತಮಿಳು ನಾಡಿನ ಜಲ್ಲಿಕಟ್ಟಿನಂತೆ ಕರ್ನಾಟಕದ ಯಾವ ಜಾನಪದ ಕ್ರೀಡೆ ತಡೆಯಲ್ಪಟ್ಟಿದೆ?
5. ಈ ಬಾರಿ ನಡೆದ ಆಹಾರ ಮೇಳದದಲ್ಲಿ ಭಾಗಹಿಸಿದ ಕರ್ನಾಟಕದ ಮಂತ್ರಿಗಳು ಯಾರು?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.02.2017ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಜನವರಿ 2017ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ **ಸರಿಯಾದ ಉತ್ತರ** 1) ಡಾ. ಎಚ್.ವಿ. ಹಂದೆ 2) ಡಾ. ಟಿ.ಎಸ್. ಸತ್ಯನಾಥ್ 3) ಮಂಜುನಾಥ ಬೆಳಕೆರೆ 4) ರಾಯಲ್ ಹಂಪಿ 5) ಕರಿಭಂಟನ ಕಾಳಗ

**ಸರಿಯಾದ ಉತ್ತರ ಕಳುಹಿಸಿದವರು.**
ಶ್ರೀ ಡಿ.ಎಸ್. ರಾಜಶೇಖರ, ಶ್ರೀಮತಿ ವಿಮಲಾ ನಾಯ್ಕ್, ಶ್ರೀಮತಿ ನಾಗವೇಣಿ ಬಸವರಾಜು, ಶ್ರೀ ಸಿ. ಬಸವರಾಜು

## ಮುನ್ನೋಟ

ಆತ್ಮೀಯ ಸದಸ್ಯರೆ, ಈ ಬಾರಿಯ ದೆಹಲಿ ಕರ್ನಾಟಕ ಸಂಘದ ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ಮನೋಹರ ಗ್ರಂಥಮಾಲಾ, ಧಾರವಾಡ ಮತ್ತು ದೆಹಲಿ ಕರ್ನಾಟಕ ಸಂಘ ಕನ್ನಡ ಭಾರತಿ ರಂಗ ಪ್ರಶಸ್ತಿಯನ್ನು ಶ್ರೀಮತಿ ಸರೋಜಿನಿ ಶೆಟ್ಟಿ ಅವರಿಗೆ ನೀಡಿ ಗೌರವಿಸಲಾಗಿದೆ. ಶ್ರೀ ಶಿವಾನಂದ ಇಂಗಳೇಶ್ವರ ಅವರ ನಿರ್ದೇಶನದಲ್ಲಿ 'ಗಾಂಧಿಗೆ ಸಾವಿಲ್ಲ' ನಾಟಕ ಯಶಸ್ವಿಯಾಗಿ ಮೂಡಿ ಬಂದಿದೆ.

ಸಂಘದ ಆಹಾರ ಮೇಳವನ್ನು ಯಶಸ್ವಿಯಾಗಿ ನಡೆಸಲು ಶ್ರಮವಹಿಸಿದ ಶ್ರೇಯ 28ಮಳಿಗೆಗಳ ಸದಸ್ಯರಿಗೆ ಸಲ್ಲಬೇಕು. ಬೆಳಿಗ್ಗೆಯಿಂದ ಸಂಜೆಯವರೆಗೆ ನಿರೀಕ್ಷೆ ಮೀರಿ ಕನ್ನಡಿಗರು ಸ್ಥಳೀಯರ ಕೈರುಚಿಯನ್ನು ಸವಿದಿದ್ದಾರೆ. ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅವರಿಗೆ ಅಭಿನಂದನೆಗಳು. ಸಂಘವು ಸ್ಥಳೀಯರಿಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಾ ಬರುತ್ತಿದೆ. ಮಾರ್ಚ್ ತಿಂಗಳ ಕೊನೆಯಲ್ಲಿ ಸ್ಥಳೀಯರಿಗೆ ಮಂಗಳೂರಿನಿಂದ ಬಾಯ್ಸ್ ಥ್ರೋನ್ ತಂಡದವರು ಬಂದು ನೃತ್ಯ ತರಬೇತಿಯನ್ನು ನೀಡಲಿದ್ದಾರೆ. ಸ್ಥಳೀಯರಿಗೆ ಅವಕಾಶ ನೀಡಿ ಇದೀಗ ನಮ್ಮ ಸಂಘದಲ್ಲಿ ನೂರಾರು ಜನ ಕಲಾವಿದರಿದ್ದಾರೆ. ಕಳೆದ ವರ್ಷ ಯಶಸ್ವಿಯಾಗಿ ನಡೆದ ಪಿಕ್‌ನಿಕ್ ಈವರೆಗೂ ಮರೆಯಲು ಸಾಧ್ಯವಿಲ್ಲ. ಹಸ್ತಿನಾಪುರ ನೆನಪಿಸಿಕೊಳ್ಳುತ್ತಾ ಈ ಬಾರಿ ಬೇರೊಂದು ಕಡೆಗೆ ಪಿಕ್‌ನಿಕ್ ಆಯೋಜನೆ ಮಾಡುತ್ತಿದ್ದೇವೆ. ಸದಸ್ಯರಿಗೆ ಮಾತ್ರ ಅವಕಾಶ. ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಿ.

ದೆಹಲಿಯಲ್ಲಿರುವ ದೆಹಲಿ ಕರ್ನಾಟಕ ಸಂಘದ ಸದಸ್ಯರಿಗೆ ಆಪತ್ಕಾಲದಲ್ಲಿ ಸ್ಪಂದಿಸಲು ಈ ಬಾರಿಯ ಸರ್ವ ಸದಸ್ಯರ ಸಭೆಯಲ್ಲಿ 'ದೆಹಲಿ ಕರ್ನಾಟಕ ಸಂಘದ ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ'ಯನ್ನು ಪ್ರಾರಂಭಿಸಲು ಸರ್ವಾನುಮತದಿಂದ ನಿರ್ಣಯವಾಗಿದೆ. ತಾವುಗಳು ಇದಕ್ಕೆ ಸ್ಪಂದಿಸುತ್ತಿರಾಗಿ ನಂಬಿರುತ್ತೇನೆ.

ದೆಹಲಿ ಕರ್ನಾಟಕ ಸಂಘದ ಸದಸ್ಯರಿಗೆ ರಂಗತರಬೇತಿಯನ್ನು ನೀಡಿ ಯಶಸ್ವಿಯಾಗಿ ನಾಟಕ ಪ್ರದರ್ಶನಗೊಳಿಸಿದ ಮೈಸೂರು ರಂಗಾಯಣದ ಮಂಜುನಾಥ ಬೆಳಕೆರೆಯವರು ಇತ್ತೀಚೆಗೆ ನಿಧನರಾಗಿದ್ದು ತಮಗೆಲ್ಲಾ ತಿಳಿದಿದೆಯಷ್ಟೆ, ಈ ಸಂದರ್ಭದಲ್ಲಿ ಆರ್ಥಿಕವಾಗಿ ಅವರ ಕುಟುಂಬಕ್ಕೆ ನೆರವು ನೀಡಲು ನಿರ್ಣಯಿಸಲಾಗಿದೆ. ದಯವಿಟ್ಟು ಧನಸಹಾಯ ನೀಡಿ ಸಹಕರಿಸಿ. ಧನ ಸಹಾಯ ಮಾಡಿದವರ ಹೆಸರನ್ನು ಅಭಿಮತದಲ್ಲಿ ಪ್ರಕಟಿಸಲಾಗುವುದು. ಈಗಾಗಲೇ ಈ ನಿಧಿಗೆ ನಮ್ಮ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ತಮಗೆ ಲಭಿಸಿದ ಪ್ರಶಸ್ತಿ ಮೊತ್ತ ರೂ. 30,000/–ವನ್ನು 'ಯಕ್ಷಧ್ರುವ'ದ ಮೂಲಕ ನೀಡುತ್ತಿದ್ದಾರೆ. ಸುಪ್ರಿಂಕೋರ್ಟಿನ ಹಿರಿಯ ನ್ಯಾಯವಾದಿ ಶ್ರೀ ಬಸವಪ್ರಭು ಪಾಟೀಲ ರೂ. 50,000/–, ಡಾ. ಎಂ.ಎಸ್. ಶಶಿಕುಮಾರ್ ರೂ. 20,000/–, ಸುಪ್ರಿಂಕೋರ್ಟಿನ ನ್ಯಾಯವಾದಿ ಶ್ರೀ ಸಿ.ಎಂ. ಅಂಗಡಿ ರೂ. 5,000/– ಶ್ರೀಮತಿ ಮಮತಾ ಗಿರಿಯಪ್ಪ ರೂ. 5,000/– ಮತ್ತು ನಾನು ರೂ. 10,000/–ವನ್ನು ನೀಡುತ್ತೇನೆ. ತಾವುಗಳು ಈ ನಿಧಿಗೆ ಹೆಚ್ಚಿನ ಸಹಾಯ ಮಾಡಿ ಸಹಕರಿಸಬೇಕಾಗಿ ವಿನಂತಿ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**2017 ಫೆಬ್ರವರಿ 12** ಭಾನುವಾರ
ಮಧ್ಯಾಹ್ನ : 3.00 ಗಂಟೆಗೆ

ಸಂಘದ ಅಂಗಳದಲ್ಲಿ **'ಮುಕ್ತ ಮಾತುಕತೆ'**

**2017 ಫೆಬ್ರವರಿ 12** ಭಾನುವಾರ
ಸಂಜೆ : 5.00 ಗಂಟೆಗೆ

'ನೃತ್ಯ ಸಿಂಚನ' ನೃತ್ಯನಿಕೇತನ ಕೊಡವೂರು ತಂಡದ ಕಲಾವಿದರಿಂದ

**2017 ಫೆಬ್ರವರಿ 12,19** ಶನಿವಾರ ಮತ್ತು ಭಾನುವಾರ
ಬೆಳಿಗ್ಗೆ : 9.00 ಗಂಟೆಗೆ



ದೆಹಲಿ ಕರ್ನಾಟಕ ಸಂಘವು ವಾರ್ಷಿಕೋತ್ಸವದ ಅಂಗವಾಗಿ 2016–17ನೇ ಸಾಲಿನ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯನ್ನು **ಫೆಬ್ರವರಿ 12 ಮತ್ತು 19ರಂದು** ದ್ವಾರಕಾ ಗ್ರೌಂಡ್‌ನಲ್ಲಿ ಆಯೋಜಿಸಲು ನಿರ್ಧರಿಸಿದೆ.

**2017 ಫೆಬ್ರವರಿ 24** ಶುಕ್ರವಾರ
ಸಂಜೆ : 6.30 ಗಂಟೆಗೆ

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ **ಶ್ರೀ ಬೊಳುವಾರು ಮಹಮ್ಮದ್ ಕುಂಞ್ಞಿ** ಅವರೊಂದಿಗೆ **ಒಂದು ಸಂಜೆ**

**2017 ಫೆಬ್ರವರಿ 26** ಭಾನುವಾರ
ಸಂಜೆ : 5.00 ಗಂಟೆಗೆ

**ಕೊಂಕಣಿ ಸಂಭ್ರಮ**

### ನೃತ್ಯ ತರಬೇತಿ

ಮಾರ್ಚ್ 27 ರಿಂದ 31ರವರೆಗೆ ಸ್ಥಳೀಯ ಕಲಾವಿದರಿಗೆ ಮಂಗಳೂರಿನ ಬಾಯ್ಸ್ ಥ್ರೋನ್ ತಂಡದಿಂದ ನೃತ್ಯ ತರಬೇತಿ. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ. 9560653021 / 9560563203, 011–26109615 / 26104818



## ಸಂಘದಲ್ಲಿ ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮ

**2017 ಫೆಬ್ರವರಿ 13** ಸೋಮವಾರ
ಸಂಜೆ : 6.30 ಗಂಟೆಗೆ

ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ (ರಿ), ದೆಹಲಿ ಘಟಕ ಅರ್ಪಿಸುವ ಯಕ್ಷಗಾನ ತಾಳಮದ್ದಳೆ–**'ಪಂಚವಟಿ'** ಯಕ್ಷಗಾನ ಕಲಾರಂಗ, ಉಡುಪಿ, ಕಲಾವಿದರಿಂದ

**2017 ಫೆಬ್ರವರಿ 19** ಭಾನುವಾರ
ಸಂಜೆ : 4.00 ಗಂಟೆಗೆ

ಸಂಘದ ಮಾಜಿ ಉಪಾಧ್ಯಕ್ಷ ಶ್ರೀ ಬಿ.ಕೆ. ಬಸವರಾಜು ಅವರ ಪುತ್ರ ಚಿ. ಚಿರಾಗ್ ಬಿ. ನಾಯಕ ಅವರ 18ನೇ ಹುಟ್ಟುಹಬ್ಬದ ಪ್ರಯುಕ್ತ **ಹರಿದಾಸ ಸಂಗೀತೋತ್ಸವ** ಹಾಗೂ **ತಿಳಿ ಹಾಸ್ಯದೊಂದಿಗೆ ಆರೋಗ್ಯ ಮತ್ತು ಆನಂದ. ಪ್ರಸ್ತುತಿ** : ಶ್ರೀಮತಿ ಸಂಗೀತ ಕಟ್ಟಿ, ಶ್ರೀ ಅನಂತ ಕುಲಕರ್ಣಿ, ಡಾ.ಕೆ.ಪಿ. ಪುತ್ತುರಾಯ ಅವರಿಂದ

### ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19 ಫೆಬ್ರವರಿ, 2017ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19, ಫೆಬ್ರವರಿ, 2017ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 26 ಫೆಬ್ರವರಿ, 2017ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 26 ಫೆಬ್ರವರಿ, 2017ರಂದು ಸಾಯಂಕಾಲ 4 ಗಂಟೆಯಿಂದ.

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 9560653021/ 9560563203, 011–26109615 / 26104818

ಅಭಿಮತ ಪ್ರಧಾನ ಸಂಪಾದಕರು
ಬಾಲಕೃಷ್ಣ ನಾಯ್ಕ್ ಡಿ.

ಅಭಿಮತ ಸಂಪಾದಕ ಮಂಡಳಿ
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 27 ಸಂಚಿಕೆ 4
ಫೆಬ್ರವರಿ 2017

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

## ಸಂಪಾದಕರ ಟಿಪ್ಪಣಿಗಳು

ಮುಖಪುಟ ಚಿತ್ರ
ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿ

# ದೆಹಲಿಯಲ್ಲಿ ಕನ್ನಡದ ಅಸ್ಮಿತತೆಯನ್ನು ಉಳಿಸಿಕೊಳ್ಳುವ ಪ್ರಯತ್ನಗಳು

ವಿಸ್ತಾರವಾದ ಭಾರತ ಭೂಖಂಡದಲ್ಲಿ ವಿಶಿಷ್ಟವಾದ ಪ್ರಾದೇಶಿಕ ವೈವಿಧ್ಯತೆಗಳು ಜನರ ಬದುಕನ್ನು ಸುಂದರಗೊಳಿಸುತ್ತವೆ. ನಮ್ಮ ದೇಶದ ವಿವಿಧ ಭಾಷೆಗಳು, ವಿಭಿನ್ನವಾದ ಭೌಗೋಳಿಕ ಪ್ರದೇಶಗಳು, ವೈಶಿಷ್ಟ್ಯಮಯವಾದ ಹಬ್ಬಗಳು ಮತ್ತು ಧಾರ್ಮಿಕ, ಸಾಂಸ್ಕೃತಿಕ ಆಚರಣೆಗಳು, ಹಲವು ಬಗೆಯ ಉಡುಗೆ ತೊಡುಗೆಗಳು ಮತ್ತು ವಿಭಿನ್ನ ರುಚಿಗಳ ಆಹಾರ ಪದ್ಧತಿಗಳು ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯಲ್ಲಿವೆ. ನವದೆಹಲಿ, ವಾಣಿಜ್ಯನಗರ ಮುಂಬಯಿ, ಮಹಾನಗರ ಕೊಲ್ಕತ್ತಾ, ಬೆಂಗಳೂರು, ಚೆನ್ನೈನಂತಹ ಊರುಗಳಲ್ಲಿ ವಿವಿಧ ಪ್ರದೇಶಗಳ ಜನರು ಬಂದು ನೆಲೆಯಾಗಿರುವುದರಿಂದ ಅಲ್ಲಿ ನಮಗೆ ದೇಶದ ವೈಶಿಷ್ಟ್ಯಗಳ ಸಣ್ಣ ತುಣುಕುಗಳ ಪರಿಚಯವಾಗುತ್ತದೆ. ದೇಶದ ರಾಜಧಾನಿಯಲ್ಲಿ ನಮಗೆ ಎಲ್ಲಾ ಕಡೆಯ ಜನರ ವೈವಿಧ್ಯತೆಗಳ ಪರಿಚಯವಾಗುವ ಅವಕಾಶವಿದೆ. ಜತೆಗೆ ನಮ್ಮದೇ ನಾಡಿನ ಆಚಾರ ವಿಚಾರಗಳನ್ನು ಒಳಗೊಂಡ ಸಂಸ್ಕೃತಿಯ ಭಾಗಗಳನ್ನು ಇಲ್ಲಿನ ಜನರಿಗೆ ಪರಿಚಯಿಸುವ ಕೆಲಸಗಳನ್ನು ದೆಹಲಿ ಕರ್ನಾಟಕ ಸಂಘ, ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ, ವಿವಿಧ ಸಾಂಸ್ಕೃತಿಕ ಸಂಘಟನೆಗಳು ಮಾಡುತ್ತಾ ಬಂದಿವೆ.

ದೇಶದ ಗಣರಾಜ್ಯೋತ್ಸವದ ದಿನ ನವದೆಹಲಿಯ ರಾಜ್‌ಪಥ್‌ನಲ್ಲಿ ರಕ್ಷಣಾಪಡೆಗಳು ನಡೆಸುವ ಪಥಸಂಚಲನದ ಸಂದರ್ಭದಲ್ಲಿ ದೇಶದ ಪ್ರಗತಿ ಮತ್ತು ವಿಭಿನ್ನ ಸಂಸ್ಕೃತಿಯನ್ನು ಬಿಂಬಿಸುವ ಟ್ಯಾಬ್ಲೋಗಳು ಆಕರ್ಷಣೆಯ ಬಿಂದುಗಳಾಗಿರುತ್ತವೆ. ಈ ನಿಟ್ಟಿನಲ್ಲಿ ಕರ್ನಾಟಕದ ಅಭಿವೃದ್ಧಿ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಜಗತ್ತಿಗೆ ತೋರಿಸುವ ಟ್ಯಾಬ್ಲೋಗಳು ಇತ್ತೀಚಿನ ವರ್ಷಗಳಲ್ಲಿ ನವದೆಹಲಿಯ ರಾಜ್‌ಪಥ್‌ನಲ್ಲಿ ಪೆರೇಡ್ ವೀಕ್ಷಿಸುವ ದೇಶವಿದೇಶದ ಆಸಕ್ತರ ಕುತೂಹಲವನ್ನು ತಣಿಸುವಲ್ಲಿ ಯಶಸ್ವಿಯಾಗಿವೆ. ಇದು ನಮ್ಮ ನಾಡಿನ ಸಾಂಸ್ಕೃತಿಕ ವೈವಿಧ್ಯತೆ ಮತ್ತು ಸೃಜನಶೀಲ ಕಲಾವಿದರ ಪ್ರತಿಭೆಗೆ ಸಲ್ಲುವ ಗೌರವವೂ ಆಗಿದೆ.

ಇದೇ ರೀತಿಯಲ್ಲಿ ಕರ್ನಾಟಕದ ಆಹಾರ ಪದ್ಧತಿಗಳು ವೈಶಿಷ್ಟ್ಯದಿಂದ ಕೂಡಿದ್ದು ಅದರ ರುಚಿಯನ್ನು ಬಡಿಸಲು ದೆಹಲಿ ಕರ್ನಾಟಕ ಸಂಘವು ಜನವರಿ ತಿಂಗಳಲ್ಲಿ ನಡೆಸಿದ ಕೈರುಚಿ ಆಹಾರಮೇಳವು ಹೆಚ್ಚಿನ ಜನರನ್ನು ಸೆಳೆದಿತ್ತು. ದೆಹಲಿಯಲ್ಲಿ ನೆಲೆಸಿದ ಕರ್ನಾಟಕ ಮೂಲದವರೆಲ್ಲರಿಗೂ ಆಹಾರಮೇಳದಲ್ಲಿ ತಮ್ಮ ಮನೆಯೂಟವನ್ನು ಸವಿಯುವ ಅವಕಾಶವನ್ನು ಒದಗಿಸಿದವರು ಮಾಡಿದ ಶ್ರಮ ಸಾರ್ಥಕತೆಯನ್ನು ಪಡೆಯಿತು. ಕರ್ನಾಟಕದ ವಿಶಿಷ್ಟ ಸಂಸ್ಕೃತಿಯನ್ನು ನಾವು ನೆಲೆನಿಂತಿರುವ ಪ್ರದೇಶದ ಜನರಿಗೆ ಪರಿಚಯಿಸುವ ಇಂತಹ ಕಾರ್ಯಕ್ರಮಗಳು ಇನ್ನೂ ಹೊಸ ಆಯಾಮಗಳನ್ನು ಪಡೆದು ವಿಸ್ತೃತವಾಗಬೇಕು ಎಂದು ಸಂಘದ ಕಾರ್ಯಕಾರಿ ಸಮಿತಿಯೂ ಆಸ್ಥೆ ವಹಿಸಿರುವುದು ಸ್ವಾಗತಾರ್ಹವಾಗಿದೆ.

ನವದೆಹಲಿಯಲ್ಲಿ ಸಾಂಸ್ಕೃತಿಕವಾಗಿ ಕರ್ನಾಟಕವನ್ನು ಬಿಂಬಿಸುವ ಕಾರ್ಯವನ್ನು ದೆಹಲಿ ಕರ್ನಾಟಕ ಸಂಘವು ಒಂದೆಡೆ ಮಾಡುತ್ತಿದ್ದರೆ, ಅದಕ್ಕೆ ಪೂರಕವಾಗಿ ಎಂಬಂತೆ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಸ್ಥಾಪನೆಗೊಂಡ ಕನ್ನಡ ಭಾಷಾ ಪೀಠವು ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕ ಇತರ ಭಾಷೆಗಳಿಗೆ ಕನ್ನಡದ ಸಾಹಿತ್ಯವನ್ನು ಪರಿಚಯಿಸುವ ಕೆಲಸವನ್ನು ಬಹಳ ಮುತುವರ್ಜಿಯಿಂದ ಮಾಡುತ್ತಿದೆ. ಇತ್ತೀಚೆಗೆ ಅಲ್ಲಿ ನಡೆದ ಸ್ವಾತಂತ್ರ್ಯೋತ್ತರ ಭಾರತೀಯ ಸಾಹಿತ್ಯದಲ್ಲಿ ಆಧುನಿಕತೆಯ ಕುರಿತು ನಡೆದ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಭಾಗವಹಿಸಿದ ಹನ್ನೊಂದು ಮುಖ್ಯಭಾಷೆಗಳ ವಿದ್ವಾಂಸರ ನಡುವೆ ಕನ್ನಡದ ಮೇಲ್ಮಟ್ಟದ ಸಾಹಿತಿಗಳು ಚರ್ಚಿಸಿದರು. ಅಲ್ಲದೇ ಕನ್ನಡ ಪೀಠವು ಸುಮಾರು ಹತ್ತು ಸಾವಿರಕ್ಕಿಂತಲೂ ಹೆಚ್ಚು ಕನ್ನಡದ ಪುಸ್ತಕಗಳನ್ನು ತನ್ನ ಗ್ರಂಥಾಲಯಕ್ಕೆ ಸೇರಿಸಿ ದೇಶ ವಿದೇಶಗಳ ಸಂಶೋಧಕರು ನವದೆಹಲಿಯಲ್ಲಿ ಕನ್ನಡವನ್ನು ಇನ್ನಷ್ಟು ಹೆಚ್ಚಿನ ಮಟ್ಟಿನಲ್ಲಿ ಅಧ್ಯಯನ ನಡೆಸಿ ಕನ್ನಡ ಪರಂಪರೆಯ ಅಭೂತವಾದ ಕೊಡುಗೆಗಳನ್ನು ತಿಳಿದುಕೊಳ್ಳುವಂತಹ ಪರಿಸರವನ್ನು ನಿರ್ಮಿಸಿದೆ. ಭಾಷೆ, ನೆಲ, ಜಲ, ಕಲೆ, ಸಾಹಿತ್ಯ, ಸಂಸ್ಕೃತಿ ಮುಂತಾದ ರಂಗಗಳಲ್ಲಿ ದೆಹಲಿಯ ಕನ್ನಡಿಗರು ಸದಾ ಕಾರ್ಯಶೀಲರಾಗಿರುವುದು ಕನ್ನಡದ ಬೆಳವಣಿಗೆಗೆ ಪೂರಕವಾಗಿದೆ.

ಬಾಲಕೃಷ್ಣ ನಾಯ್ಕ್ ಡಿ.




# ಸರ್ವ ಸದಸ್ಯರ ವಾರ್ಷಿಕ ಸಭೆ

ದೆಹಲಿ ಕರ್ನಾಟಕ ಸಂಘದ 2015–16ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಇದೇ ಜನವರಿ 8ರಂದು ಸಂಘದ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸರ್ವ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಾರ್ಷಿಕ ವರದಿಯನ್ನು ಹಾಗೂ ಕೋಶಾಧಿಕಾರಿ ಶ್ರೀ ಕೆ.ಎಸ್.ಜಿ. ಶೆಟ್ಟಿ ಅವರು ಪರಿಶೋಧಿತ ಲೆಕ್ಕಪತ್ರ ಮತ್ತು 2016–17ನೇ ಸಾಲಿನ ಬಜೆಟನ್ನು ಮಂಡಿಸಿದರು. ಉಪಾಧ್ಯಕ್ಷರುಗಳಾದ ಶ್ರೀಮತಿ ಆಶಾಲತಾ ಎಂ., ಶ್ರೀಮತಿ ಎಸ್.ಸಿ. ಹೇಮಲತ ಹಾಗೂ ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಘದ ಮಾಜಿ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ, ಮಾಜಿ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್, ಮಾಜಿ ಕೋಶಾಧಿಕಾರಿಗಳಾದ ಶ್ರೀ ಈಶ್ವರ ಮಡಿವಾಳ್, ಶ್ರೀ ಕೆ.ಆರ್. ರಾಮಮೂರ್ತಿ, ಡಾ. ವೈ. ಅವನೀಂದ್ರನಾಥ್ ರಾವ್, ಹಿರಿಯರಾದ ಶ್ರೀ ಬಸವರಾಜ್ ಎಸ್. ಕಲ್ಲೂರು, ಶ್ರೀ ಎನ್.ಎ. ಮಾಧವ, ಡಾ. ಅಹಲ್ಯಾ ಚಿಂತಾಮಣಿ, ಸದಸ್ಯರುಗಳಾದ ಶ್ರೀ ಲಕ್ಷ್ಮಣ್ ಮಲ್ಯ, ಶ್ರೀ ಪಿ.ಎಸ್. ಶೆಟ್ಟಿ, ಶ್ರೀ ಎನ್.ಆರ್. ಶ್ರೀನಾಥ್, ಶ್ರೀ ಆರ್.ಎಸ್. ಶ್ಯಾಮಸುಂದರ್, ಶ್ರೀ ರಾಜಕುಮಾರ್, ಶ್ರೀ ಎನ್.ಪಿ. ಚಂದ್ರಶೇಖರ, ಶ್ರೀ ಈಶ್ವರಲಿಂಗ್ ಅರೇರಾ, ಶ್ರೀ ಶ್ರೀಹರಿ, ಶ್ರೀ ಎ.ಟಿ. ಶ್ರೀನಿವಾಸ್, ಶ್ರೀ ನರಸಿಂಹ ಮೂರ್ತಿ, ಶ್ರೀ ಕೃಷ್ಣಪ್ಪ, ಶ್ರೀ ಸಾಬುದರ್ಗಾ ಮೊದಲಾದವರು ಸೂಕ್ತ ಸಲಹೆ ಹಾಗೂ ಅಭಿಪ್ರಾಯಗಳನ್ನು ನೀಡಿದರು.

ಚರ್ಚೆಯ ಬಳಿಕ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರಗಳನ್ನು ಅನುಮೋದಿಸಲಾಯಿತು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರೂ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ಸರ್ವ ಸದಸ್ಯರ ವಾರ್ಷಿಕ ಸಭೆಯು ಬೆಳಿಗ್ಗೆ 11.00 ಗಂಟೆಯಿಂದ 3.00 ಗಂಟೆಯವರೆಗೆ ನಡೆಯಿತು.

ಈ ವರ್ಷ ನಮ್ಮನ್ನು ಅಗಲಿದ ಸಂಘದ ಆಜೀವ ಸದಸ್ಯರುಗಳಾದ ಶ್ರೀ ಬಾಸ್ಮೆ ಎಸ್.ಬಿ., ಶ್ರೀ ಎಸ್.ಡಿ. ಹಲಗೇಕರ್, ಶ್ರೀ ನಂಜೇ ಗೌಡ, ಶ್ರೀ ಬಿ. ಸುಬ್ರಹ್ಮಣ್ಯ ಪ್ರಸಾದ್, ಡಾ. ಎಲ್.ಆರ್. ಕಡಿಯಾಳಿ, ಶ್ರೀ ಸುಬ್ರಹ್ಮಣ್ಯ ಭಟ್, ಶ್ರೀ ಜಯಪ್ರಕಾಶ್ ಬೆಂಗೇರಿ, ಶ್ರೀ ಎಸ್. ಜಗದೀಶ್, ಶ್ರೀ ಗಣೇಶ್ ಪೂಜಾರಿ, ಶ್ರೀ ಆರ್.ಎ. ಪಕ್ಕಳ, ಶ್ರೀಮತಿ ಸುಷ್ಮಾ ಅವರನ್ನು ನೆನೆದು ಎರಡು ನಿಮಿಷಗಳ ಮೌನ ಪ್ರಾರ್ಥನೆ ನಡೆಸಲಾಯಿತು. ಅ

***ಅಭಿಮತ ವರದಿ***

# ಕಂಬಳ-ಕಾವೇರಿ ಅನ್ಯಾಯ ಪ್ರತಿಭಟಿಸಿ

## ದೆಹಲಿ ಕರ್ನಾಟಕ ಸಂಘದ ಪ್ರತಿಭಟನೆ

ರಾಜ್ಯದ ಮೇಲೆ ಆಗುವ ಅನ್ಯಾಯವನ್ನು ಖಂಡಿಸಲು ರಾಷ್ಟ್ರ ರಾಜಧಾನಿಯಲ್ಲಿ ಕನ್ನಡಿಗರು ಬೃಹತ್ ಪ್ರಮಾಣದಲ್ಲಿ ಒಟ್ಟು ಸೇರಿ ತಮ್ಮ ಧ್ವನಿಯನ್ನು ಕೇಂದ್ರ ಸರ್ಕಾರಕ್ಕೆ ತಲುಪಿಸಬೇಕು ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಹೇಳಿದರು. ರಾಜ್ಯ ಕರಾವಳಿಯ ಜನಪದ ಕ್ರೀಡೆ ಕಂಬಳಕ್ಕೆ ಅವಕಾಶ ನೀಡಬೇಕು, ಕಾವೇರಿಯಲ್ಲಿ ರಾಜ್ಯಕ್ಕೆ ಅನ್ಯಾಯ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಜನವರಿ 22 ರಂದು ಆಯೋಜಿಸಲಾಗಿದ್ದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಇಂದು ಕಂಬಳವನ್ನು ನಿಷೇಧಿಸಲಾಗಿದೆ. ಮುಂದಿನ ದಿನಗಳಲ್ಲಿ ರಾಜ್ಯದ ಇನ್ನಿತರ ಗ್ರಾಮೀಣ ಕ್ರೀಡೆಗಳ ಮೇಲೆಯೂ ನಿಷೇಧದ ತೂಗುಗತ್ತಿ ತೂಗಬಹುದು. ಆದ್ದರಿಂದ ಕನ್ನಡಿಗರು ಈಗಲೇ ಎಚ್ಚೆತ್ತು ಕಂಬಳದ ಮೇಲಿನ ನಿಷೇಧವನ್ನು ರದ್ದು ಪಡಿಸಲು ಶ್ರಮಿಸಬೇಕು ಎಂದು ವಸಂತ ಶೆಟ್ಟಿ ಬೆಳ್ಳಾರೆ ಆಗ್ರಹಿಸಿದರು. ಜಲ್ಲಿಕಟ್ಟಿನ ಮೇಲಿದ್ದ ನಿಷೇಧವನ್ನು ತೆರವುಗೊಳಿಸಲು ದೆಹಲಿಯಲ್ಲಿದ್ದ ತಮಿಳರು ಕೂಡ ಹೋರಾಡಿದ್ದಾರೆ. ರಾಜ್ಯದ ನೆಲ, ಜಲ, ಭಾಷೆ ಮತ್ತು ಸಾಂಸ್ಕೃತಿಕ ಚಹರೆಗೆ ಅನ್ಯಾಯವಾದಾಗ ಇದೇ ಮಾದರಿಯಲ್ಲಿ ದೆಹಲಿ ಕನ್ನಡಿಗರು ಒಗ್ಗಟ್ಟಾಗಿ ಹೋರಾಡಬೇಕು ಎಂದು ಕರೆ ಇತ್ತರು.

ರಾಜ್ಯದ ಎಲ್ಲ ರಾಜಕೀಯ ಪಕ್ಷಗಳು, ಸಾಹಿತಿಗಳು, ಕಲಾವಿದರು ಮತ್ತು ಕನ್ನಡ ಪರ ಸಂಘಟನೆಗಳು ಪಕ್ಷಬೇಧ ಮರೆತು ರಾಜ್ಯದ ನೆಲ, ಜಲ ಮತ್ತು ಸಂಸ್ಕೃತಿಯ ವಿಷಯದಲ್ಲಿ ಒಂದಾಗಬೇಕು. ಒಂದಾಗಿ ಪ್ರತಿಭಟಿಸಿದಾಗ ಸರ್ಕಾರಗಳು ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ನೀಡುತ್ತವೆ. ಇದಕ್ಕೆ ಜಲ್ಲಿಕಟ್ಟುವಿಗಾಗಿನ ತಮಿಳರ ಹೋರಾಟ ಒಂದು ನಿದರ್ಶನವಾಗಿದೆ ಎಂದರು.

ಇತ್ತೀಚೆಗೆ ಕಾವೇರಿಗಾಗಿ ಮಾಜಿ ಪ್ರಧಾನಿ ಎಚ್. ಡಿ. ದೇವೇಗೌಡರು ಉಪವಾಸ ಸತ್ಯಾಗ್ರಹ ಕೈಗೊಂಡಾಗ ಕರ್ನಾಟಕದ ಎಲ್ಲ ರಾಜಕೀಯ ಪಕ್ಷಗಳು ಒಗ್ಗಟ್ಟು ತೋರಿಸಿದ್ದು, ಸುಪ್ರೀಂ ಕೋರ್ಟ್‌ನ ಆದೇಶವಿದ್ದರೂ ಕಾವೇರಿ ನಿರ್ವಹಣಾ ಮಂಡಳಿ ರಚನೆ ಆಗಬಾರದು ಎಂದು ಖುದ್ದು ಕೇಂದ್ರ ಸರ್ಕಾರವೇ ಸುಪ್ರೀಂ ಕೋರ್ಟ್‌ಗೆ ತಿಳಿಸುವಂತೆ ಆಯಿತು ಎಂದು ಬೆಳ್ಳಾರೆ ಈ ಸಂದರ್ಭದಲ್ಲಿ ನೆನಪಿಸಿಕೊಂಡರು. ನಾವು ಯಾವುದೇ ಸರ್ಕಾರದ ಪರವಾಗಿ ಅಥವಾ ವಿರುದ್ಧವಾಗಿ ಹೋರಾಟ ಮಾಡುತ್ತಿಲ್ಲ. ಸರ್ಕಾರಗಳಲ್ಲಿರುವ ನ್ಯೂನತೆಯನ್ನು ಸರಿಪಡಿಸಿ, ನಮ್ಮ ರಾಜ್ಯದ ಹಿತಾಸಕ್ತಿ ಅಡಕವಾಗಿರುವ ವಿಷಯಗಳಲ್ಲಿ ಜನಪ್ರತಿನಿಧಿಗಳು ಒಗ್ಗಟ್ಟಾಗಿ ಕಾರ್ಯನಿರ್ವಹಿಸಬೇಕು ಎಂಬ ಒತ್ತಡ ಸೃಷ್ಟಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದರು. ಕನ್ನಡಿಗರಿಗೆ ಅನ್ಯಾಯವಾದಾಗ ದೆಹಲಿ ಕರ್ನಾಟಕ ಸಂಘವೇ ದೆಹಲಿ ಮಟ್ಟದಲ್ಲಿ ಮುಂಚೂಣಿಯಲ್ಲಿ ನಿಂತು ಪ್ರತಿಭಟನೆ ನಡೆಸುವ ಭರವಸೆಯನ್ನು ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ನೀಡಿದ್ದಾರೆ.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತಾ ಎಂ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ. ಎಂ. ನಾಗರಾಜ, ಪದಾಧಿಕಾರಿಗಳಾದ ಶ್ರೀ ಟಿ. ಪಿ. ಬೆಳ್ಳಿಯಪ್ಪ, ಶ್ರೀ ಜಮುನಾ ಸಿ. ಮಠದ, ಶ್ರೀ ಕೆಎಸ್‌ಜಿ ಶೆಟ್ಟಿ, ಶ್ರೀ ಸಖಾರಾಮ ಉಪ್ಪೂರು, ಶ್ರೀಮತಿ ಪೂಜಾ ಪಿ. ರಾವ್, ಡಾ. ಎಂ.ಎಸ್. ಶಶಿಕುಮಾರ್, ಶ್ರೀ ಬಾಬುರಾಜ್ ಪೂಜಾರಿ, ಶ್ರೀಮತಿ ಸುಮಿತಾ ಮುರಗೋಡ ಸೇರಿದಂತೆ ದೆಹಲಿಯ ನೂರಾರು ಕನ್ನಡಿಗರು ಉಪಸ್ಥಿತರಿದ್ದರು. ಅ

***ಅಭಿಮತ ವರದಿ***





# 'ಕನ್ನಡದ ಸಾಧಕರನ್ನು ಗುರುತಿಸಿ ಅಭಿನಂದಿಸುವ ಕಾರ್ಯ ಅತ್ಯಂತ ಶ್ಲಾಘನೀಯ'-ಟಿ.ಎಸ್. ನಾಗಾಭರಣ

ದೆಹಲಿ ಕರ್ನಾಟಕ ಸಂಘವು ದೇಶದ ರಾಜಧಾನಿಯಲ್ಲಿ ಕನ್ನಡ ನಾಡು-ನುಡಿ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಅತ್ಯಂತ ಗುಣಮಟ್ಟದ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಾ ಬಂದಿದ್ದು, ಅದರ ಜೊತೆಗೆ ಕನ್ನಡ ಭಾಷೆ, ಕಲೆ, ಸಂಸ್ಕೃತಿಗಾಗಿ ದುಡಿದು ಅಮೋಘ ಕೊಡುಗೆ ನೀಡಿ, ಅಗಲಿ ಹೋದ ಮಹನೀಯರ ನೆನಪಿನಲ್ಲಿ ಪ್ರಶಸ್ತಿಗಳನ್ನು ಪ್ರತಿಷ್ಠಾಪಿಸಿ, ಕನ್ನಡಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಮಾಡುತ್ತಿರುವ ಸಾಧಕರನ್ನು ಗುರುತಿಸಿ ಗೌರವಿಸುತ್ತಿರುವುದು ಅತ್ಯಂತ ಶ್ಲಾಘನೀಯವಾದ ಕಾರ್ಯವಾಗಿದೆ ಎಂದು ಕನ್ನಡದ ಖ್ಯಾತ ರಂಗ ಮತ್ತು ಚಲನಚಿತ್ರ ನಿರ್ದೇಶಕರಾದ ಟಿ.ಎಸ್. ನಾಗಾಭರಣ ಅಭಿಪ್ರಾಯಪಟ್ಟರು. ಅವರು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಜನವರಿ 29ರಂದು ಈ ಸಾಲಿನ 'ದೆಹಲಿ ಕರ್ನಾಟಕ ಸಂಘ ಡಾ. ಶಿವರಾಮ ಕಾರಂತ' ಪ್ರಶಸ್ತಿಯನ್ನು ಪ್ರಕಾಶನ ಕ್ಷೇತ್ರದಲ್ಲಿ ಅಪೂರ್ವ ಸೇವೆಗೈದ ಧಾರವಾಡದ ಮನೋಹರ ಗ್ರಂಥಮಾಲಾ ಮತ್ತು 'ದೆಹಲಿ ಕರ್ನಾಟಕ ಸಂಘ ಕನ್ನಡ ಭಾರತಿ ರಂಗ ಪ್ರಶಸ್ತಿ'ಯನ್ನು ರಂಗಭೂಮಿಯಲ್ಲಿ ಅನನ್ಯ ಸೇವೆ ಸಲ್ಲಿಸಿದ ಹೆಸರಾಂತ ನಟಿ ಸರೋಜಿನಿ ಎಸ್. ಶೆಟ್ಟಿ ಅವರಿಗೆ ನೀಡಿ ಗೌರವಿಸುತ್ತಾ ಮಾತಾಡುತ್ತಿದ್ದರು. ಈ ಎರಡೂ ಪ್ರಶಸ್ತಿಗಳು ಐವತ್ತು ಸಾವಿರ ರೂಪಾಯಿ ನಗದು, ಪ್ರಶಸ್ತಿಪತ್ರ, ಶಾಲು ಹಾಗೂ ಸಂಘದ ಸ್ಮರಣಿಕೆಯನ್ನು ಒಳಗೊಂಡಿವೆ.

ನಾಗಾಭರಣ ಅವರು ಮಾತನಾಡುತ್ತಾ ಮನೋಹರ ಗ್ರಂಥಮಾಲೆಯ ಸ್ಥಾಪಕರಾದ ಜಿ.ಬಿ. ಜೋಷಿಯವರೊಡನೆ ತಾನು ಸಾರಥಿಯಾಗಿ ಕಳೆದ ಅಂದಿನ ದಿನಗಳನ್ನು ನೆನಪಿಸಿಕೊಂಡರು. ರಮಾಕಾಂತ ಜೋಷಿ ಮತ್ತು ಮನೋಹರ ಗ್ರಂಥಮಾಲೆಯ ಜೊತೆಗಿನ ತಮ್ಮ ಅನ್ಯೋನ್ಯವಾದ ಸಂಬಂಧವನ್ನು ವಿವರಿಸುತ್ತಾ ಈ ಗ್ರಂಥಮಾಲೆ ಕನ್ನಡದ ನೂರಾರು ಉದಯೋನ್ಮುಖ ಬರಹಗಾರರನ್ನು ಗುರುತಿಸಿ ಪ್ರೋತ್ಸಾಹಿಸುವುದರ ಮೂಲಕ ಸಾಹಿತ್ಯ ಲೋಕಕ್ಕೆ ನೀಡಿರುವ ಕೊಡುಗೆ ಅಪಾರವಾಗಿದೆ ಎಂದರು. ಸರೋಜಿನಿ ಎಸ್. ಶೆಟ್ಟಿ ಅವರು 1975ರಲ್ಲಿ 'ಚೋಮನದುಡಿ' ಚಿತ್ರದಲ್ಲಿ ಅಭಿನಯಿಸುತ್ತಿದ್ದಾಗ ಸಹನಿರ್ದೇಶಕನಾಗಿದ್ದ ನಾನು ಅವರನ್ನು ಅಂದಿನಿಂದ ಇಂದಿನವರೆಗೆ ಹಂತ ಹಂತವಾಗಿ ಬೆಳೆದು ಬಂದ ರೀತಿಯನ್ನು ನೋಡುತ್ತಾ ಬಂದಿದ್ದೇನೆ. ಇಷ್ಟು ಬೆಳೆದು ನಾಟಕ ಮತ್ತು ಚಲನಚಿತ್ರ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡಿರುವರಾದರೂ ಈಕೆಗೆ ಕಿಂಚಿತ್ತೂ ಗರ್ವವಿಲ್ಲ. ಸದಾ ನಗುಮುಖದ ಮುಗ್ಧ ಮತ್ತು ಶ್ರೇಷ್ಠ ಕಲಾವಿದೆ' ಎಂದು ಶ್ಲಾಘಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸರೋಜಿನಿ ಎಸ್. ಶೆಟ್ಟಿ ಅವರು 'ನಾನು ಐದನೇ ತರಗತಿಯಲ್ಲಿರುವಾಗಲೇ ಮುಖಕ್ಕೆ ಬಣ್ಣ ಹಚ್ಚಿದಾಗ ತಾಯಿಯವರ ಪ್ರೋತ್ಸಾಹದಿಂದ ಈ ಮಟ್ಟಕ್ಕೆ ತಲುಪಿದ್ದೇನೆ' ಎಂದರು. ಐತಿಹಾಸಿಕ, ಪೌರಾಣಿಕ ನಾಟಕಗಳಲ್ಲಿ ಪಾತ್ರವಹಿಸಿ ಬಹಳಷ್ಟು ಪ್ರಶಸ್ತಿಗಳು ಬಂದಿವೆ. ದೆಹಲಿ ಕರ್ನಾಟಕ ಸಂಘದ ಈ ಪ್ರಶಸ್ತಿಗೆ ಆರಿಸಿದ ಶ್ರೀನಿವಾಸ ಜಿ. ಕಪ್ಪಣ್ಣ ಮತ್ತು ಟಿ.ಎಸ್. ನಾಗಾಭರಣ ಅವರಿಗೆ ತಾನು ಕೃತಜ್ಞೆ ಎಂದರು. ದೇಶದ ರಾಜಧಾನಿಯಲ್ಲಿ ಅನೇಕ ಮಹತ್ತರವಾದ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವ ಇಂತಹ ಸಂಘವು ನನ್ನನ್ನು ಗೌರವಿಸುತ್ತಿರುವುದು ನನ್ನ ಸೌಭಾಗ್ಯ ಎಂದರು.

ಡಾ. ಶಿವರಾಮ ಕಾರಂತ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ರಾಮಾಕಾಂತ ಜೋಷಿಯವರು ಮನೋಹರ ಗ್ರಂಥ ಮಾಲೆಗೆ ಶಿವರಾಮ ಕಾರಂತ ಪ್ರಶಸ್ತಿ ಬಂದಿರುವುದು ಶಿವರಾಮ ಕಾರಂತರಿಗೂ ಮನೋಹರ ಗ್ರಂಥಮಾಲೆಗೂ ಇರುವ ಸಂಬಂಧವನ್ನು ವ್ಯಕ್ತಪಡಿಸುತ್ತದೆ ಎಂದರು. ಮನೋಹರ ಗ್ರಂಥಮಾಲೆ ಕಾರಂತರ 'ಮರಳಿ ಮಣ್ಣಿಗೆ', 'ಬೆಟ್ಟದ ಜೀವ' ಹಾಗೂ ಇನ್ನೂ ಅನೇಕ ಕೃತಿಗಳನ್ನು ಪ್ರಕಟಿಸಿದೆ. ಮನೋಹರ ಗ್ರಂಥಮಾಲೆ ಪ್ರತಿಷ್ಠಿತರ ಪುಸ್ತಕಗಳನ್ನು ಮಾತ್ರ ಪ್ರಕಟಿಸುವುದಲ್ಲದೆ ಸಾಮಾನ್ಯರ ಪುಸ್ತಕಗಳನ್ನು ಕೂಡ ಪ್ರಕಟಿಸುತ್ತದೆ ಎಂದು ನುಡಿದರು. ಮನೋಹರ ಗ್ರಂಥಮಾಲೆ ಪ್ರಕಟಿಸಿರುವ ಕನ್ನಡದ ಏಳು ಜನರಿಗೆ ಜ್ಞಾನಪೀಠ ಪ್ರಶಸ್ತಿ ಬಂದಿದೆ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕೇಂದ್ರ ಲಲಿತಾ ಕಲಾ ಅಕಾಡೆಮಿಯ ಅಧ್ಯಕ್ಷರಾದ ಸಿ.ಸು. ಕೃಷ್ಣ ಶೆಟ್ಟಿ ಅವರು ಮಾತನಾಡುತ್ತ ಮನೋಹರ ಗ್ರಂಥಮಾಲಾ ಕನ್ನಡ ಸಾರಸ್ವತ ಲೋಕಕ್ಕೆ ಕೊಟ್ಟ ಕೊಡುಗೆ ಅಪಾರವಾಗಿದ್ದು, ಕಾಲೇಜು ದಿನಗಳಲ್ಲಿ ಈ ಗ್ರಂಥಮಾಲೆಯು ಪ್ರಕಟಿಸಿದ ಹಲವಾರು ಅಮೂಲ್ಯ ಕೃತಿಗಳನ್ನು ಓದಿಕೊಂಡು ಬೆಳೆದದ್ದನ್ನು ನೆನಪಿಸಿಕೊಂಡರು. ಮನೋಹರ ಗ್ರಂಥಮಾಲೆ ಪ್ರಕಾಶನ ಕ್ಷೇತ್ರದಲ್ಲಿ ಅತ್ಯಂತ ಮಹತ್ವದ ಕೆಲಸ ಮಾಡುತ್ತಿದ್ದು, ಜಿ.ಬಿ. ಜೋಷಿ, ರಮಾಕಾಂತ ಜೋಷಿ ಮತ್ತು ಸಮೀರ್ ಜೋಷಿ ಅವರು ನೀಡುತ್ತಿರುವ ಕೊಡುಗೆ ಬಹಳ ದೊಡ್ಡದು ಎಂದರು. ಅದೇ ರೀತಿ ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ಕ್ಷೇತ್ರದಲ್ಲಿ ಅಮೋಘವಾಗಿ ನಟಿಸುತ್ತಿರುವ ಓರ್ವ ಶ್ರೇಷ್ಠ ನಟಿಯನ್ನು ಗೌರವಿಸುತ್ತಿರುವುದು ದೆಹಲಿ ಕರ್ನಾಟಕ ಸಂಘ ಮಾಡುತ್ತಿರುವ ಒಳ್ಳೆಯ ಕೆಲಸಗಳಿಗೆ ನಿದರ್ಶನವಾಗಿದೆ ಎಂದರು. ಈಗಾಗಲೇ ದೆಹಲಿ ಕರ್ನಾಟಕ ಸಂಘವು ಲಲಿತಾ ಕಲಾ ಅಕಾಡೆಮಿ ಜೊತೆ ಸೇರಿ ಕಾರ್ಯಕ್ರಮಗಳ ಯೋಜನೆಯನ್ನು ಹಾಕಿಕೊಳ್ಳುವ ಆಶಯವನ್ನು ವ್ಯಕ್ತಪಡಿಸಿದ್ದು ಶೀಘ್ರವೇ ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುವ ಭರವಸೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಶ್ರೀ ಬಲವಂತ ರಾವ್ ಪಾಟೀಲ ಅವರು ಮಾತನಾಡುತ್ತ ದೆಹಲಿ ಕರ್ನಾಟಕ ಸಂಘವು ಸದಾ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದೆ. ಒಳ್ಳೆಯ ಗುಣಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹೊರರಾಜ್ಯದಲ್ಲಿ ಆಯೋಜಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ದೆಹಲಿ ಕರ್ನಾಟಕ ಸಂಘಕ್ಕೆ ಸಹಾಯ ನೀಡುತ್ತಿದೆ ಎಂದರು. ನಾವು ಬೇರೆ ರಾಜ್ಯದಲ್ಲಿಲ್ಲ, ಕರ್ನಾಟಕದಲ್ಲೇ ಇದ್ದೇವೆ ಅನ್ನಿಸುತ್ತದೆ ಎಂದರು. ಅವರು ಮನೋಹರ ಗ್ರಂಥಮಾಲೆಯು ಎಂಟು ದಶಕಗಳಿಗೂ ಹೆಚ್ಚು ಕಾಲದಿಂದ ಪ್ರಕಾಶನ ಕೆಲಸವನ್ನು ಬಹಳ ಮುತುವರ್ಜಿಯಿಂದ ಮಾಡುತ್ತಾ ಬಂದಿರುವುದನ್ನು ಹಾಗೂ ರಂಗಭೂಮಿ ಕ್ಷೇತ್ರದಲ್ಲಿ ಸರೋಜಿನಿ ಶೆಟ್ಟಿ ಅವರ ಸಾಧನೆಯನ್ನೂ ಶ್ಲಾಘಿಸಿದರು. ದೆಹಲಿ ಕರ್ನಾಟಕ ಸಂಘವು ಡಾ. ಸರೋಜಿನಿ ಮಹಿಷಿ ಪ್ರಶಸ್ತಿ, ಡಾ. ಶಿವರಾಮ ಕಾರಂತ ಪ್ರಶಸ್ತಿ ಮತ್ತು ಕನ್ನಡ ಭಾರತಿ ರಂಗ ಪ್ರಶಸ್ತಿಗಳನ್ನು ನೀಡುತ್ತಿರುವುದು



ಪ್ರಶಂಸನಾರ್ಹವಾಗಿದೆ, ದೆಹಲಿ ಕರ್ನಾಟಕ ಸಂಘದ ಈ ಕಾರ್ಯವೈಖರಿಯು ರಾಜ್ಯ ಮತ್ತು ದೇಶದಾದ್ಯಂತ ಇರುವ ಇತರ ಕನ್ನಡ ಸಂಘ ಸಂಸ್ಥೆಗಳಿಗೆ ಮಾದರಿಯಾಗಬೇಕು ಎಂದು ನುಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು 'ಯಾವುದೇ ಒಂದು ನಾಡಿನ ಭಾಷೆ, ಸಂಸ್ಕೃತಿ, ಸಾಹಿತ್ಯ ಮತ್ತು ಕಲೆ ಸದಾ ಬೆಳೆಯುವಂತಾಗಬೇಕಾದರೆ ಅದರ ಏಳಿಗೆಗಾಗಿ ಶ್ರಮಪಟ್ಟು ದುಡಿದು ತಮ್ಮ ಜೀವನವನ್ನೇ ಮುಡಿಪಾಗಿಟ್ಟಂತಹ ಮಹನೀಯರನ್ನು ಸ್ಮರಿಸುವುದರ ಜೊತೆಜೊತೆಗೆ ಸಮಕಾಲೀನ ಜಗತ್ತಿನಲ್ಲಿ ಮಾತೃಭಾಷೆ, ಕಲೆ, ಸಂಸ್ಕೃತಿಯ ಅಭಿವೃದ್ಧಿಗಾಗಿ ದುಡಿಯುವ ಸಾಧಕರನ್ನು ಗುರುತಿಸಿ ಅಭಿನಂದಿಸುವಂತಹ ಕಾರ್ಯವನ್ನು ಸಹ ಮಾಡಿದಾಗಲೇ, ದೇಶದ ರಾಜಧಾನಿಯಲ್ಲಿ ಇರುವ ನಮ್ಮಂತಹ ಸಂಘದ ಉದ್ದೇಶ ಸಾರ್ಥಕವಾದಂತಾಗುವುದು' ಎಂದು ನುಡಿದರು.

ಕಾರ್ಯಕ್ರಮದ ಆರಂಭದಲ್ಲಿ ಬೆಂಗಳೂರಿನ ಖ್ಯಾತ ಹಿನ್ನೆಲೆ ಗಾಯಕಿ ಶ್ವೇತಾಪ್ರಭು ಅವರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು. ವಿದೂಷಿ ವೀಣಾ ಮರಡೂರ್ ಹಾಗೂ ವಿದ್ವಾನ್ ತಾನ್‌ಸೇನ್ ಅವರು, ಕ್ರಮವಾಗಿ ಶ್ವೇತಾ ಅವರಿಗೆ ಹಾರ್ಮೋನಿಯಂ ಮತ್ತು ತಬಲಾ ಸಾಥ್ ನೀಡಿದರು. ಕನ್ನಡದ ಖ್ಯಾತ ಕವಿಗಳು, ದಾಸರು ಮತ್ತು ವಚನಕಾರರ ಸಾಹಿತ್ಯವನ್ನು ಅತ್ಯಂತ ಸುಶ್ರಾವ್ಯವಾಗಿ ಹಾಡಿ ನೆರೆದ ಜನರನ್ನು ಮಂತ್ರಮುಗ್ಧರನ್ನಾಗಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಸ್ವಾಗತಿಸಿ, ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಸಖಾರಾಮ ಉಪ್ಪೂರು ಕಾರ್ಯಕ್ರಮವನ್ನು ನಿರೂಪಿಸಿದರು. ಜಂಟೀ ಕಾರ್ಯದರ್ಶಿ ಶ್ರೀಮತಿ ಜಮುನಾ ಸಿ. ಮಠದ ಅವರು ವಂದಿಸಿದರು.

ಸಭಾ ಕಾರ್ಯಕ್ರಮದ ನಂತರ ಶ್ರೀ ಶಿವಾನಂದ ಇಂಗಳೇಶ್ವರ ಅವರ ನಿರ್ದೇಶನದ 'ಗಾಂಧಿಗೆ ಸಾವಿಲ್ಲ' ನಾಟಕವನ್ನು 'ದಿನಕರ', ದೆಹಲಿಯ ಸ್ಥಳೀಯ ಹವ್ಯಾಸಿ ಕನ್ನಡ ಕಲಾವಿದರನ್ನೊಳಗೊಂಡ ತಂಡ, ಪ್ರಸ್ತುತಪಡಿಸಿತು. ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ನಾಗಮೋಹನದಾಸ್ ಹಾಗೂ ಹಿರಿಯ ನ್ಯಾಯವಾದಿ ಶ್ರೀ ಸಿ.ಎಂ. ಅಂಗಡಿ ಅವರು ನಾಟಕದ ಪ್ರಯತ್ನವನ್ನು ಮೆಚ್ಚಿ ಮಾತನಾಡಿ, ನಿರ್ದೇಶಕರು ಹಾಗೂ ತಂಡದ ಎಲ್ಲಾ ಕಲಾವಿದರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಅ

**ಸಖಾರಾಮ ಉಪ್ಪೂರು**

# ರಂಗನಟಿ ಸರೋಜಿನಿ ಎಸ್. ಶೆಟ್ಟಿ ಅವರಿಗೆ
# ದೆಹಲಿ ಕರ್ನಾಟಕ ಸಂಘ ಕನ್ನಡ ಭಾರತಿ ರಂಗ ಪ್ರಶಸ್ತಿ

ಈ ಸಾಲಿನ ದೆಹಲಿ ಕರ್ನಾಟಕ ಸಂಘ ಕನ್ನಡ ಭಾರತಿ ರಂಗ ಪ್ರಶಸ್ತಿಯನ್ನು ನಟಿ ಸರೋಜಿನಿ ಎಸ್. ಶೆಟ್ಟಿ ಅವರಿಗೆ ನೀಡಲಾಗಿದೆ. ದೆಹಲಿ ಕರ್ನಾಟಕ ಸಂಘದಿಂದ 2015ರಿಂದ ಕನ್ನಡ ರಂಗಭೂಮಿಯಲ್ಲಿ ಹೆಸರು ಪಡೆದವರಿಗೆ "ಕನ್ನಡ ಭಾರತಿ" ಹೆಸರಿನಲ್ಲಿ ನೀಡಲಾಗುತ್ತಿರುವ ಪ್ರಶಸ್ತಿಯ ಐವತ್ತು ಸಾವಿರ ರೂಪಾಯಿಗಳ ನಗದು ಹಣವನ್ನು ಒಳಗೊಂಡಿರುತ್ತದೆ. 2015ರಲ್ಲಿ ಈ ಪ್ರಶಸ್ತಿಯನ್ನು ಎಂ.ವಿ. ನಾರಾಯಣ ರಾವ್ ಅವರಿಗೆ ನೀಡಲಾಗಿತ್ತು.

ಸರೋಜಿನಿ ಶೆಟ್ಟಿಯವರು ಮೂಲತಃ ಮಂಗಳೂರಿನವರು. ಅವರು 1970ರಲ್ಲಿ ಮೊದಲ ಬಾರಿಗೆ ರಂಗ ಪ್ರವೇಶ ಮಾಡಿದರು. 1975ರಲ್ಲಿ ಸಿನಿಮಾ ರಂಗ ಪ್ರವೇಶ ಮಾಡಿದರು. ಪಿ. ಲಂಕೇಶರ 'ಸಿದ್ಧತೆ', ಮಣ್ಣಿನ ಮಗಳು ಅಬ್ಬಕ್ಕ, ದಕ್ಷ ಯಜ್ಞ, ಬೆಳವಡಿ ಮಲ್ಲಮ್ಮ, ಉಳ್ಳಾಲದ ರಾಣಿ ಅಬ್ಬಕ್ಕ, ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀ ಬಾಯಿ, ವೀರ ಎಚ್ಚಮ್ಮ ನಾಯಕ, ಭಕ್ತ ಪ್ರಹ್ಲಾದ, ಶನಿ ಪ್ರಭಾವ, ಭೂ ಕೈಲಾಸ, ಬಬ್ರುವಾಹನ ಇತ್ಯಾದಿ ಇವರು ಅಭಿನಯಿಸಿದ ಕನ್ನಡ ನಾಟಕಗಳಲ್ಲಿ ಮುಖ್ಯವಾದವುಗಳು.

ಮಂಗಳೂರು ಆಕಾಶವಾಣಿಯ 'ಎ' ಗ್ರೇಡ್ ಕಲಾವಿದೆಯಾಗಿರುವ ಈಕೆ ಟಿಂಗರ ಬುಡ್ಡಣ್ಣ, ಆಶಾಡದ ಒಂದು ದಿನ, ಕೆ.ಟಿ. ಶ್ರೀಧರ್‌ರವರ ರಾಷ್ಟ್ರೀಯ ಹೆದ್ದಾರಿ ಡಿವಿಷನ್‌ನಲ್ಲಿ ಸಾವು, ಮೂಕ ಹಕ್ಕಿ, ಕಡಲ ಹಕ್ಕಿ, ಪ್ರವೀಣ್ ರೋಯ್, ಭಗವದ್ದುಜ್ಜೀಕಿಯಂ, ಕಾಳಿದಾಸ ಇತ್ಯಾದಿ ಆಕಾಶವಾಣಿಯ ನಾಟಕಗಳಲ್ಲೂ ಭಾಗವಹಿಸಿದ್ದಾರೆ.

ಇವರು ಅಭಿನಯಿಸಿದ ತುಳು ನಾಟಕಗಳು ಸುಮಾರು 2000 ಮೇಲ್ಪಟ್ಟು ಪ್ರದರ್ಶನಗಳನ್ನು ಕಂಡಿವೆ. ಅವುಗಳಲ್ಲಿ ಮುಖ್ಯವಾದವುಗಳು

ಕಾಸರಗೋಡು ಚಿನ್ನ ನಿರ್ದೇಶನದ ನಿನ್ನ ಮೋಕೆದ, ಬಂಗಾರ ಬಾಲೆ, ಕಂಡನಿ ಬೊಡೆದಿ, ಮುಂಬೈ ಷಣ್ಮುಖಾನಂದ ಹಾಲ್‌ನಲ್ಲಿ ಪ್ರದರ್ಶನಗೊಂಡ ಒರಿಯೆ ಮಗೆ ಒರಿಯೆ, ಪೊರ್ತು ಕಂತಂಡ್, ಶ್ರೇಷ್ಠ ನಟಿ ಪ್ರಶಸ್ತಿ ಪಡೆದ ನಂಬುಲೆ ನಂಬಾದ್ ಕೊರ್ಪೆ, ಗಂಟೆ ಏತಾಂಡ್, ಈರ್ ದೂರ, ಕುಡರಿ ರಾಮೆ, ಮಹಿಮೆದ ಮತ್ಸ್ಯೇಂದ್ರ, ಇತ್ಯಾದಿ. ಇತ್ತೀಚೆಗೆ ಅದ್ದೂರಿ ಪ್ರದರ್ಶನ ಕಂಡ ದುಬೈ, ಮುಂಬೈ ಹಾಗೂ ಕರ್ನಾಟಕದ ಹಲವಾರು ಕಡೆಗಳಲ್ಲಿ ಜನಪ್ರಿಯತೆ ಗಳಿಸಿದ ಪೌರಾಣಿಕ ಶ್ರೀ ಕ್ಷೇತ್ರ ಕಟೀಲಿನ ಪುಣ್ಯ ಕಥೆ "ಕಟೀಲ್‌ದಪ್ಪೆ ಉಳ್ಳಾಲ್ದಿ" ನಾಟಕದಲ್ಲಿ ಶ್ರೀ ದೇವಿಯಾಗಿ ಪಾತ್ರ, "ಮಹಿಷಾ ಮರ್ದಿನಿ" ನಾಟಕದಲ್ಲಿ ಶ್ರೀ ದೇವಿಯಾಗಿ ಪಾತ್ರಗಳನ್ನು ನಿರ್ವಹಿಸಿ ಜನಪ್ರಿಯರಾಗಿದ್ದಾರೆ.

ಬಿ.ವಿ. ಕಾರಂತ ನಿರ್ದೇಶನದ ರಾಷ್ಟ್ರ ಪ್ರಶಸ್ತಿ ವಿಜೇತ ಚಿತ್ರ ಡಾ. ಶಿವರಾಮ ಕಾರಂತರ ಚೋಮನದುಡಿಯಲ್ಲಿ ಅಭಿನಯಿಸಿದ ಇವರ ಇತರ ಪ್ರಮುಖ ಕನ್ನಡ ಚಲನಚಿತ್ರಗಳು ಪುಟ್ಟಣ್ಣ ಕಣಗಾಲ್ ನಿರ್ದೇಶನದ ಶುಭ ಮಂಗಳ, ಪುಟ್ಟ ಹೆಂಡ್ತಿ, ಮಾತೃ ವಾತ್ಸಲ್ಯ, ಗೋಲಿಬಾರ್, ವಿಷ್ಣುವರ್ಧನ್ ಅಭಿನಯದ ಈ ಜೀವ ನಿನಗಾಗಿ, ಕೃಷ್ಣ ನೀ ಬೇಗನೆ ಬಾರೋ, ಶಿವ ಶಂಕರ್ ಅಂಬರೀಶ್ ಅಭಿನಯದ ಅರ್ಜುನ್, ಹಳ್ಳಿಯಾದರೇನು ಶಿವ, ಚೆಲ್ಲಾಪಿಲ್ಲಿ, ಇತ್ಯಾದಿ. ಕನ್ನಡ ಚಲನಚಿತ್ರದ ಹೊರತಾಗಿ ಅಮಿತಾ ಬಚ್ಚನ್ ಅಭಿನಯದ ಮನಮೋಹನ್ ದೇಸಾಯಿ ನಿರ್ದೇಶನದ ಹಿಂದಿ ಚಲನಚಿತ್ರ ಗಂಗಾ ಯಮುನಾ ಸರಸ್ವತಿಯಲ್ಲಿ ಒಂದು ಕಿರು ಪಾತ್ರ ಮಾಡಿರುವರು. ರಾಷ್ಟ್ರ ಪ್ರಶಸ್ತಿ ವಿಜೇತ ಅಡೂರು ಗೋಪಾಲಕೃಷ್ಣನ್ ನಿರ್ದೇಶನದಲ್ಲಿ ಮಮ್ಮುಟಿ ಅಭಿನಯದ ಮಲಯಾಳಂ ಚಲನಚಿತ್ರ ವಿಧೇಯನ್‌ನಲ್ಲೂ ಅಭಿನಯಿಸಿದ್ದಾರೆ. ತುಳುನಾಡ ಸಿರಿ ಚಲನಚಿತ್ರದಲ್ಲಿ ಸಿರಿಯಾಗಿ ನಾಯಕಿ ಪಾತ್ರ, ನಂತರ ಬೊಳ್ಳಿದೋಟ, ಸಂಗಮ ಸಾಕ್ಷಿ, ದಾರೆದ ಸೀರೆ, ಬಂಗಾರ್ ಪಟ್ಲೇರ್, ಸಪ್ಟೆಂಬರ್ 8, ಬದಿ, ಮಾರಿಬಲೆ, ಕಡಲಮಗೆ, ತೆಲಿಕೆದ ಬೊಳ್ಳಿ ಮತ್ತು ರಿಕ್ಷಾ ಡ್ರೈವರ್, ಚಾಲಿಪೋಲಿಲು, ಚಂಡಿಕೋರಿಯಲ್ಲಿ ಅಭಿನಯ ಮಾಡಿದ್ದಾರೆ. ಬಿಡುಗಡೆಯಾಗಲಿರುವ "ಜೈ ತುಳುನಾಡ್" ಸಿನಿಮಾದಲ್ಲಿಯೂ ಅಭಿನಯಿಸಿದ್ದಾರೆ.


ಅಬುದಾಬಿ, ಮಸ್ಕತ್, ದುಬಾಯಿ, ಬಹ್ರೈನ್, ಮುಂಬೈ, ಚೆನ್ನೈ, ಮೈಸೂರು, ಬೆಳಗಾಂ, ಮಹಾರಾಷ್ಟ್ರದ ನಾನಾ ಕಡೆಗಳಲ್ಲಿ, ಕರ್ನಾಟಕ ಬೆಂಗಳೂರು ಮೊದಲ್ಗೊಂಡು ಹಲವಾರು ಕಡೆ ರಂಗಭೂಮಿಯಲ್ಲಿ ಅಭಿನಯವನ್ನು ಮಾಡಿದ್ದಾರೆ. ಬರವುದ ಬಂಡಸಾಲೆ (ಮಕ್ಕಳ ಚಿತ್ರ), ಡಾ। ಶಿವರಾಮ ಕಾರಂತರ ಸರಸಮ್ಮನ ಸಮಾಧಿ, ಚಿರಸ್ಮರಣೆ, ನಾಗಾಭರಣ ನಿರ್ದೇಶನದ ಜೀವನ್ಮುಖಿ, ವಿಜಯ ತೆಂಡೂಲ್ಕರ್‌ರವರ ಇರುಳು, ಶೇಕ್ಸ್‌ಪಿಯರ್‌ರವರ ಒಥೆಲೋದಲಿ ಡೆಸ್ಡಿಮೋನ ಪಾತ್ರ, ಹಲವಾರು ಸಿನಿಮಾಗಳಿಗೆ ಕಂಠದಾನ ಕೂಡಾ ಮಾಡಿದ್ದಾರೆ. ಅವರಿಗೆ ಹತ್ತು ಹಲವು ಪ್ರತಿಷ್ಠಿತ ಪ್ರಶಸ್ತಿ ಪುರಸ್ಕಾರ ಮತ್ತು ಸನ್ಮಾನಗಳೂ ಲಭಿಸಿವೆ. ಅ

**ಅಭಿಮತ ವರದಿ**



# ದೆಹಲಿ ಕರ್ನಾಟಕ ಸಂಘ ಡಾ. ಶಿವರಾಮ ಕಾರಂತ ಪ್ರಶಸ್ತಿ

ಈ ಸಾಲಿನ ದೆಹಲಿ ಕರ್ನಾಟಕ ಸಂಘ ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ಧಾರವಾಡದ ಮನೋಹರ ಗ್ರಂಥಮಾಲಾಕ್ಕೆ ಪ್ರಕಾಶನ ಕ್ಷೇತ್ರಕ್ಕೆ ನೀಡಲಾಗುತ್ತಿದೆ. ಈ ಪ್ರಶಸ್ತಿಯ ಮೊತ್ತವನ್ನು ಪ್ರಸಕ್ತ ಸಾಲಿನಿಂದ ಇಪ್ಪತ್ತೈದು ಸಾವಿರ ರೂಪಾಯಿಗಳಿಂದ ಐವತ್ತು ಸಾವಿರ ರೂಪಾಯಿಗಳಿಗೆ ಏರಿಸಲಾಗಿದೆ. ದೆಹಲಿ ಕರ್ನಾಟಕ ಸಂಘವು ಹಿರಿಯ ಸಾಹಿತಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಕೋಟ ಶಿವರಾಮ ಕಾರಂತ ಅವರ ನೆನಪಿನಲ್ಲಿ ಸಂಘದ ಸುವರ್ಣ ವರ್ಷದ ಸಂದರ್ಭದಲ್ಲಿ 1998ರಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಆರಂಭ ಮಾಡಿತು.



ಮೊದಲ ಪ್ರಶಸ್ತಿಯನ್ನು ಹೊರನಾಡಿನಲ್ಲಿದ್ದು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಮಹತ್ತರ ಸಾಧನೆಗಾಗಿ ಡಾ. ಯಶವಂತ ಚಿತ್ತಾಲರಿಗೆ ನೀಡಲಾಯಿತು. ನಂತರ ವಿಜ್ಞಾನ ಮತ್ತು ಪರಿಸರ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆ ಮಾಡಿದ ಜಿ.ಟಿ. ನಾರಾಯಣ ರಾವ್ ಅವರಿಗೆ ನೀಡಲಾಯಿತು. ಕಾರಂತರಿಗೆ ಪ್ರಿಯವಾಗಿದ್ದು, ಅವರು ಮಹತ್ತರ ಸಾಧನೆ ಮಾಡಿದ್ದ ಯಕ್ಷಗಾನ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಬನ್ನಂಜೆ ಸಂಜೀವ ಸುವರ್ಣ ಮತ್ತು ಪರಿಸರ ಕ್ಷೇತ್ರದಲ್ಲಿ ಸಾಧನೆಗೈದ ಸಾಲುಮರದ ತಿಮ್ಮಕ್ಕನವರಿಗೆ, 2014ರಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದ ಶ್ರೀ ಕೋಟಿಗಾನ ಹಳ್ಳಿ ರಾಮಯ್ಯ ಅವರಿಗೆ ಸಂಘವು ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಅ

## ಮನೋಹರ ಗ್ರಂಥಮಾಲಾ, ಧಾರವಾಡ

ಈಗ ತನ್ನ 84 ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಧಾರವಾಡದ ಮನೋಹರ ಗ್ರಂಥ ಮಾಲಾ ಕಳೆದ ಎಂಟು ದಶಕಗಳಲ್ಲಿ ಈ ಮಾಲೆ ಬರೀ ಪ್ರಕಟಣೆಯನ್ನು ಒಂದು ಉದ್ಯೋಗವನ್ನಾಗಿ ಮಾತ್ರ ಮಾಡಿಕೊಳ್ಳದೆ ಕನ್ನಡ ಭಾಷೆ-ನಾಡು-ನುಡಿಯನ್ನು ಕಟ್ಟಿ ಬೆಳೆಸುವಲ್ಲಿ ಮಹತ್ತರವಾದ ಪಾತ್ರವಹಿಸುತ್ತ ಬಂದಿದೆ. ಸುಮಾರು ನೂರು ವರ್ಷಗಳ ಹಿಂದೆ ಇಡೀ ರಾಷ್ಟ್ರವೇ ಸ್ವಾತಂತ್ರ್ಯಕ್ಕಾಗಿ ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಒಂದಾಗಿ ಹೋರಾಡುತ್ತಿದ್ದಾಗ ಉತ್ತರ ಕರ್ನಾಟಕದಲ್ಲಿ ಅನೇಕ ಹಿರಿ-ಕಿರಿಯ ಲೇಖಕರು, ಬರಹಗಾರರು ತಮ್ಮ ಬರಹಗಳ ಮೂಲಕ ಜನ ಜಾಗೃತಿಯಲ್ಲಿ ತೊಡಗಿದ್ದರು. ದ.ರಾ. ಬೇಂದ್ರೆ ಪ್ರಮುಖರಲ್ಲಿ ಒಬ್ಬರು. ತಮ್ಮ ಸಮಾನ ಮನಸ್ಕರ ಜತೆ ಸೇರಿಕೊಂಡು ಗೆಳೆಯರ ಗುಂಪು ಸ್ಥಾಪಿಸಿದರು. ಸ್ವಲ್ಪವೇ ದಿನ ಕಾರ್ಯ ವಹಿಸಿದರೂ ಗೆಳೆಯರ ಗುಂಪು ಸಾಂಸ್ಕೃತಿಕವಾಗಿ ಬಹು ದೊಡ್ಡ ಹೆಸರನ್ನು ಮಾಡಿತು. ಇದರ ಸಾಧನೆ, ಆದರ್ಶಗಳೇ ಮನೋಹರ ಗ್ರಂಥಮಾಲೆಯ ಸ್ಥಾಪನೆಗೆ ಕಾರಣವಾದವು.

ಬೆಟಗೇರಿ ಕೃಷ್ಣಶರ್ಮಾ, ಜಿ.ಬಿ.ಜೋಶಿ ಮತ್ತು ಗೋವಿಂದ ಚುಳಕಿಯವರು ಗೆಳೆಯರ ಗುಂಪಿನ ಸದಸ್ಯರಾಗಿದ್ದರು. 1933 ಜನವರಿ 15ರಂದು ಬೆಟಗೇರಿ ಕೃಷ್ಣಶರ್ಮ (ಆನಂದಕಂದ) ರ ಸುದರ್ಶನ ಕಾದಂಬರಿಯ ಪ್ರಕಟಣೆಯೊಂದಿಗೆ ಮನೋಹರ ಗ್ರಂಥಮಾಲೆ ಪ್ರಾರಂಭವಾಯಿತು. ಮೂವರು ಕೂಡಿ ಸ್ಥಾಪಿಸಿದ ಸಂಸ್ಥೆಯ ಹಿಂದೆ ಗೆಳೆಯರ ಗುಂಪಿನ ಸಹಕಾರ ಆದರ್ಶವಿತ್ತು. ಇವೇ ಆದರ್ಶಗಳೇ ಅವರ ಬಂಡವಾಳವಾಗಿದ್ದವು. ಮುದ್ರಣಕ್ಕೆ ಬೇಕಾದ ಕಾಗದ ಮುಂಬಯಿಯ ಕಾಗದ ವ್ಯಾಪಾರಿ ಜಯಂತಿಲಾಲ ಗಾಂಧಿ ಮತ್ತು ಕಂಪನಿಯವರು ಉದ್ದರಿಯಿಂದ ಕೊಟ್ಟರು. ಮುದ್ರಣವನ್ನು ಧಾರವಾಡದ ಕೆ.ಜಿ. ರಾಯದುರ್ಗ ಅವರು ತಮ್ಮ ಮೋಹನ ಮುದ್ರಣಾಲಯದಲ್ಲಿ ಉದ್ದರಿಯಲ್ಲಿ ಮಾಡಿಕೊಟ್ಟರು. ಗೆಳೆಯರ ಗುಂಪಿನ ಸದಸ್ಯರು ಯಾವ ಗೌರವ ಧನವಿಲ್ಲದೆಯೇ ಬರೆದು ಕೊಟ್ಟರು. ಹೀಗೆ ಮೊದಲ ವರ್ಷದಲ್ಲಿಯೇ ಆರು ಪುಸ್ತಕಗಳು ಪ್ರಕಟವಾದವು. ಇದೇ ರೀತಿ ಮುಂದುವರೆಯುವುದರಿಂದ ಸ್ಥಾಪಕರ ಮೂರು ಸಂಸಾರಗಳು ನಡೆಯುವುದು ಸಾಧ್ಯವಿಲ್ಲವೆಂದೆನಿಸಿದಾಗ ಜಿ.ಬಿ. ಜೋಶಿಯವರೊಬ್ಬರೇ ಮಾಲೆಯ ಭಾರವನ್ನು ಸ್ವತಂತ್ರವಾಗಿ ಹೊರಲು ಸಿದ್ಧರಾದರು. 60 ವರ್ಷಗಳ ಕಾಲ ಅಂದರೆ ತಮ್ಮ ಜೀವನದ ಉದ್ದಕ್ಕೂ ಜಿ.ಬಿ.ಯವರು ಮನೋಹರ ಗ್ರಂಥಮಾಲೆಯನ್ನು ಗಟ್ಟಿಯಾಗಿ, ಕನ್ನಡದ ಸತ್ವಶಾಲಿ ಪ್ರಕಾಶನ ಸಂಸ್ಥೆಯನ್ನಾಗಿ ಬೆಳೆಯಿಸಿದರು.

ಮಾಲೆಯ ಭಾರ ಹೊತ್ತ ಜಿ.ಬಿಯವರು ಲಾಭ, ಲುಕ್ಸಾನು, ಸುಖ, ದುಃಖ, ಪ್ರಸಿದ್ಧಿ ಅಥವಾ ಸೋಲಿನ ಹೊಣೆಯನ್ನು ಬಹು ಸಮರ್ಥವಾಗಿ ನಿಭಾಯಿಸಿದರು. ಸಾಹಿತ್ಯ ಕೃತಿಗಳ ಆಯ್ಕೆಗಾಗಿ, ಸಲಹೆಗಾಗಿ ದ.ರಾ.ಬೇಂದ್ರೆ, ವಿನಾಯಕ ಗೋಕಾಕ ಮತ್ತು ರಂ.ಶ್ರೀ ಮುಗಳಿಯವರು ಬೆನ್ನಿಗೆ ನಿಂತರು. ಸುಮಾರು ಇಪ್ಪತ್ತೈದು ವರ್ಷಗಳವರೆಗೆ ಇವರ ಮಾರ್ಗದರ್ಶನವಿತ್ತು. ನಂತರ ಕನ್ನಡಕ್ಕೊಬ್ಬನೇ ಕೀರ್ತಿ ಎಂದು ಹೆಸರಾದ ಕೀರ್ತಿನಾಥ ಕುರ್ತಕೋಟಿಯವರು ಸಾಹಿತ್ಯ ಸಲಹೆಗಾರರಾಗಿ ಸೇರಿಕೊಂಡರು. ವಿಮರ್ಶೆಗೆ ಒಂದು ಹೊಸ ಭಾಷೆ ನೀಡಿ, ವಿಮರ್ಶೆಯೂ ಒಂದು ಸೃಜನಶೀಲ ಕಲೆ ಎಂದು ತೋರಿಸಿಕೊಟ್ಟ ಕೀರ್ತಿನಾಥ ಕುರ್ತಕೋಟಿಯವರು ಜಿ.ಬಿಯವರ ಜತೆಯಲ್ಲಿ ಹೆಗಲಿಗೆ ಹೆಗಲು ಹಚ್ಚಿ ದುಡಿಯುವುದರ ಜತೆಯಲ್ಲಿ ಮಾಲೆಗೆ ಒಂದು ಹೊಸ ಆಯಾಮವನ್ನೇ ನೀಡಿದರು. ಈಗ ಮಾಲೆಗೆ ಖ್ಯಾತ ನಾಟಕಕಾರ, ಜ್ಞಾನಪೀಠ ಪ್ರಶಸ್ತಿ ವಿಜೇತ ಗಿರೀಶ ಕಾರ್ನಾಡರು ಸಾಹಿತ್ಯ ಸಲಹೆಗಾರರಾಗಿದ್ದಾರೆ.

ಗ್ರಂಥಮಾಲೆಯು 1933 ರಿಂದ ಸತತವಾಗಿ ಪುಸ್ತಕಗಳನ್ನು ಪ್ರಕಾಶಿಸುತ್ತ ಬಂದಿದೆ. ಕಾದಂಬರಿ, ಕಾವ್ಯ, ನಾಟಕ, ಏಕಾಂಕಗಳು, ಜೀವನ ಚರಿತ್ರೆ, ದಿನಚರಿ, ಪ್ರವಾಸ ಸಾಹಿತ್ಯ, ಇತಿಹಾಸ, ಪ್ರಬಂಧಗಳು, ಹರಟೆಗಳು ಹೀಗೆ ಎಲ್ಲ ಪ್ರಕಾರಗಳ ಪುಸಕಗಳನ್ನು ಮಾಲೆ ಪ್ರಕಟಿಸಿದೆ. ಕನ್ನಡ ಸಾಹಿತ್ಯಕ್ಕೆ ಒಟ್ಟಾರೆಯಾಗಿ ಅದ್ಭುತ ಕಾಣಿಕೆ ನೀಡಿರುವ ಗ್ರಂಥಮಾಲೆ ಎಂದೂ ತನ್ನ ಪ್ರಾರಂಭದ ಆದರ್ಶ, ಉದ್ದೇಶಗಳಿಂದ ಹಿಂದೆ ಸರಿದಿಲ್ಲ.

ಪ್ರಕಟವಾದ ಕೃತಿಗಳು ನಾಲ್ಕುನೂರಕ್ಕೂ ಹೆಚ್ಚು. ಶ್ರೀರಂಗರ ವಿಶ್ವಾಮಿತ್ರ ಸೃಷ್ಟಿ , ಶಿವರಾಮ ಕಾರಂತರ ಮರಳಿ ಮಣ್ಣಿಗೆ, ವಿನಾಯಕರ ಸಮರಸವೇ ಜೀವನ, ಮಿರ್ಜಿ ಅಣ್ಣಾರಾಯರ ನಿಸರ್ಗ ಅ.ನ. ಕೃಷ್ಣರಾಯರ ಸಂಧ್ಯಾರಾಗ, ಮಂಗಳಸೂತ್ರ, ಶಂಕರ ಮೊಕಾಶಿ ಪುಣೇಕರರ ಗಂಗವ್ವ ಮತ್ತು ಗಂಗಾಮಾಯಿ, ರಾವ ಬಹದ್ದೂರರ ಗ್ರಾಮಾಯಣ, ಯು. ಆರ್. ಅನಂತಮೂರ್ತಿಯವರ ಸಂಸ್ಕಾರ, ಶ್ರೀಕೃಷ್ಣ ಆಲನಹಳ್ಳಿಯ ಕಾಡು ಹೀಗೆ ಹಲವಾರು ಉತ್ತಮ ಕಾದಂಬರಿಗಳು, ನಾ.ಕಸ್ತೂರಿಯವರ ಚಕ್ರದೃಷ್ಟಿ, ಗ್ರಹದಾರಣ್ಯಕ, ರಾ.ಕು. ಅವರ ಗಾಳಿಪಟ, ಮೊದಲಾದ ಕೃತಿಗಳನ್ನು ಕನ್ನಡಿಗರು ಅತ್ಯಂತ ಅಭಿಮಾನದಿಂದ ಸ್ವೀಕರಿಸಿದರು. ದ.ರಾ. ಬೇಂದ್ರೆಯವರ ನಾಟಕ ಹೊಸ ಸಂಸಾರ, ಕೀರ್ತಿನಾಥ ಕುರ್ತಕೋಟಿಯವರ ಆ ಮನಿ, ಜಡಭರತರ ಮೂಕಬಲಿ, ಗಿರೀಶ ಕಾರ್ನಾಡರ ಯಯಾತಿ, ತುಘಲಕ್, ಹಯವದನ, ಚಂದ್ರಶೇಖರ ಕಂಬಾರರ ಋಷ್ಯ ಶೃಂಗ ಮೊದಲಾದ ನಾಟಕಗಳು ಓದುಗರ ಮಧ್ಯೆಯೂ, ರಂಗಭೂಮಿಯ ಮೇಲೂ ಯಶಸ್ವಿ ನಾಟಕಗಳೆನಿಸಿದವು. ಇದಲ್ಲದೆ ದ.ರಾ. ಬೇಂದ್ರೆ, ವಿನಾಯಕ, ರಂ.ಶ್ರೀ. ಮುಗಳಿ, ಎ.ಕೆ. ರಾಮಾನುಜನ್‌ರ ಕವನ ಸಂಕಲನಗಳನ್ನೂ ಮಾಲೆ ಪ್ರಕಟಿಸಿತು. ವಿ.ಸೀ. ಸದಾನಂದ ನಾಯಕ, ಮಿರ್ಜಿ ಅಣ್ಣಾರಾಯ, ದ.ರಾ.ಬೇಂದ್ರೆ ಮೊದಲಾದವರ ವಿಮರ್ಶಾ ಗ್ರಂಥಗಳನ್ನು ಮಾಲೆ ಪ್ರಕಟಿಸಿದೆ. ಸಾಹಿತ್ಯದ ವಿವಿಧ ಪ್ರಕಾರಗಳನ್ನು ಕೊಡುವುದರ ಜತೆಜತೆಯಲ್ಲಿ ಆಗಾಗ ಹೊಸ-ಹೊಸ ಪ್ರಯೋಗಗಳಿಗೂ ಗ್ರಂಥ ಮಾಲೆ ಕೈ ಹಾಕಿದೆ. ಅ

**ಅಭಿಮತ ವರದಿ**



# ಸರೋಜಿನಿ ಶೆಟ್ಟಿ ಸಂದರ್ಶನ



ದೆಹಲಿ ಕರ್ನಾಟಕ ಸಂಘ ಕನ್ನಡ ಭಾರತಿ ರಂಗ ಪ್ರಶಸ್ತಿ ಪುರಸ್ಕೃತ **ನಟಿ ಸರೋಜಿನಿ ಎಸ್. ಶೆಟ್ಟಿ** ಅವರೊಂದಿಗೆ ಸಂಘದ ಅಧ್ಯಕ್ಷರಾದ **ಶ್ರೀ ವಸಂತ ಶೆಟ್ಟಿ ಬೆಳ್ಳಾರೆ** ಅವರು ಅಭಿಮತಕ್ಕಾಗಿ ವಿಶೇಷವಾಗಿ ಸಂದರ್ಶಿಸಿದರು. ಸಂದರ್ಶನದ ಆಯ್ದಭಾಗವನ್ನು ಅಭಿಮತದ ಓದುಗರಿಗೆ ನೀಡುತ್ತಿದ್ದೇವೆ.

**"ತುಂಬಾ ಸಿನಿಮಾಗಳನ್ನು ಮಾಡಿ ಹೆಸರು ಪಡೆಯಬೇಕು ಎಂದು ನಾನು ಈವರೆಗೆ ಹೋಗಿಲ್ಲ. ನಾನು ನನ್ನ ಕುಟುಂಬಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟೆ"**

*ನೀವು ರಂಗಭೂಮಿಗೆ ಬರಲು ಕಾರಣ ಏನು? ಆ ಸಂದರ್ಭದಲ್ಲಿ ರಂಗಭೂಮಿ ಹೇಗಿತ್ತು? ಮುಖ್ಯವಾಗಿ ಮಹಿಳೆಯರಿಗೆ ರಂಗಭೂಮಿಗೆ ಬರುವುದಾದರೆ ಯಾವ ರೀತಿಯ ಪರಿಸರ ಇತ್ತು?*

ನಾನು ರಂಗಭೂಮಿಗೆ ಸಿನಿಮಾ ಮುಖೇನ ಬಂದದ್ದು. ಬಿ.ವಿ. ಕಾರಂತ ನಿರ್ದೇಶನದ ಕನ್ನಡ ಚಲನಚಿತ್ರ ಶಿವರಾಮ ಕಾರಂತರ 'ಚೋಮನ ದುಡಿ'ಯಲ್ಲಿ ಅಭಿನಯಿಸಿದೆ. ಟಿ.ಎಸ್. ನಾಗಾಭರಣ ಅವರು ಸಹಾಯಕ ನಿರ್ದೇಶಕರಾಗಿದ್ದರು. ಆಮೇಲೆ ತುಳುನಾಡ ಸಿರಿಯಲ್ಲಿ ಅಭಿನಯಿಸಿದೆ. ತುಳು ರಂಗಭೂಮಿಯ ಹೆಸರಾಂತ ನಟ ನಿರ್ದೇಶಕ ಕೆ.ಎನ್. ಟೇಲರ್ ಅವರು 'ಕಂಡನಿ ಬೊಡೆದಿ' ನಾಟಕ ಬರೆದು ಅದರಲ್ಲಿ ತುಂಬಾ ಒಳ್ಳೆಯ ಪಾತ್ರ ಇದೆ ಮಾಡು ಅಂದರು. ಆದರೆ ಮನೆಯಲ್ಲಿ ಅನುಮತಿ ಇರಲಿಲ್ಲ. ನಾಟಕ ಬೇಡವೇ ಬೇಡ, ಸಿನಿಮಾದಲ್ಲಿ ಅವಕಾಶ ಬಂದ್ರೆ ಮಾತ್ರ ತಗೋ ಅಂದಿದ್ದರು. ಆಮೇಲೆ ಕೆ.ಎನ್. ಟೇಲರ್ ನಮ್ಮ ಸಂಬಂಧಿಕರೊಬ್ಬರ ಮೂಲಕ ಪ್ರಭಾವ ಬೀರಿ ಮನೆಯಲ್ಲಿ ಒಪ್ಪಿಗೆ ಸಿಕ್ಕಿತು. ಕೆ.ಎನ್. ಟೇಲರ್ ಅವರ 'ಕಂಡನಿ ಬೊಡೆದಿ' ನನ್ನ ಪ್ರಥಮ ನಾಟಕ. ಆ ಸಂದರ್ಭದಲ್ಲಿ ಐದು ಜನ ಕಲಾವಿದರು ಅಬುದಾಬಿಯಲ್ಲಿ ಹೋಗಿ ಅಭಿನಯಿಸಿದೆವು. ಪ್ರಥಮ ಬಾರಿಗೆ ಗಲ್ಫ್‌ಗೆ ಹೋದ ಮಹಿಳಾ ಕಲಾವಿದೆ ನಾನು. ಆಗ ತುಂಬಾ ಶ್ರದ್ಧೆಯಿಂದ ರಿಹರ್ಸಲ್ ನಡೆಯಬೇಕಿತ್ತು. ಆಗಿನ ರಿಹರ್ಸಲ್‌ನಲ್ಲಿ ಭಯ, ಭಕ್ತಿ, ಶ್ರದ್ಧೆ ಎಲ್ಲ ಇತ್ತು. ತುಂಬಾ ಕಷ್ಟ ಇತ್ತು. ಹೇಳಿದ ಸಮಯಕ್ಕೆ ಸರಿಯಾಗಿ ಹೋಗಬೇಕು. ತುಂಬಾ ನಿಯತ್ತಿನಿಂದ ಒಂದು ತಿಂಗಳು ರಿಹರ್ಸಲ್ ಆಗಿ ಆಮೇಲೆ ಸ್ಟೇಜ್‌ನಲ್ಲಿ ಪ್ರದರ್ಶನ ಕೊಡುತ್ತಿದ್ದೆವು. ಈಗ ಒಂದು ನಾಟಕ ಅಂದ್ರೆ ಒಂದೇ ವಾರದಲ್ಲಿ ಸ್ಟೇಜ್ ಮೇಲೆ ಹೋಗಿ ಪ್ರದರ್ಶನ ಕೊಡ್ತಾರೆ. ಆಗಿನ ಕಾಲದಲ್ಲಿ ತುಂಬಾ ಶ್ರದ್ಧೆ ಇತ್ತು, ನಿಯತ್ತು ಇತ್ತು. ಈಗ ರಂಗಭೂಮಿಯಲ್ಲಿ ಅದು ಕಂಡು ಬರುತ್ತಿಲ್ಲ.

*ಕೆ.ಎನ್. ಟೇಲರ್ ಅವರು ಜಯಮಾಲಾ, ಕಲ್ಪನಾ ಮೊದಲಾದವರನ್ನು ತನ್ನ ನಾಟಕದ ಮತ್ತು ತುಳು ಚಲನಚಿತ್ರದ ಮೂಲಕ ತಂದು ನಂತರ ಅವರೆಲ್ಲಾ ಕನ್ನಡ ಚಲನಚಿತ್ರ ಲೋಕದಲ್ಲಿ ಮಿಂಚಿದ್ದಾರೆ. ನೀವು ಕನ್ನಡ ಚಲನಚಿತ್ರ ಲೋಕದಲ್ಲಿ ಆ ಮಟ್ಟಕ್ಕೆ ಹೋಗದಿರುವ ಕಾರಣ ಏನು?*

ನನಗೆ ಅವಕಾಶಗಳು ಬಂದಿತ್ತು. ಆದರೆ ಕೆಲವಷ್ಟು ಅವಕಾಶಗಳನ್ನು ಮಾತ್ರ ನಾನು ತೆಗೆದುಕೊಂಡೆ. 'ಪುಟ್ಟ ಹೆಂಡ್ತಿ' ಅಂತ ಒಂದು ಚಿತ್ರದಲ್ಲಿ ನಾನು ಪಾತ್ರ ಮಾಡಿದೆ. ಪ್ರಭಾಕರ್ ಅವರು ಹೀರೋ ಆಗಿದ್ದರು. ಅಂಬರೀಶ್ ಅವರು ಆ ಪಾತ್ರ ಕೊಡಿಸಿದ್ದು. ಅಂಬರೀಶ್ ಅವರ ಅರ್ಜುನ್ ಮತ್ತು ಇನ್ಸ್‌ಪೆಕ್ಟರ್ ಕ್ರಾಂತಿಕುಮಾರ್ ಎಂಬ ಎರಡು ಸಿನಿಮಾದಲ್ಲಿ ಮಾಡಿದ್ದೆ. ವಿಷ್ಣುವರ್ಧನ್ ಅವರೊಂದಿಗೆ ಈ ಜೀವ ನಿನಗಾಗಿ, ಕೃಷ್ಣ ನೀ ಬೇಗನೆ ಬಾರೋ, ಶಿವಶಂಕರ್ ಮೂರು ಸಿನಿಮಾದಲ್ಲಿ ಮಾಡಿದ್ದೆ. ವಿಷ್ಣುವರ್ಧನ್ ಮತ್ತು ಅಂಬರೀಶ್ ಅವರು ಒಂದು ಮಾತು ಹೇಳಿದ್ರು. 'ಸರೋಜಿನಿ, ಪಾತ್ರ ಯಾವುದೇ ಆಗಲಿ ಸಿಕ್ಕಿದ ಪಾತ್ರಗಳನ್ನು ಮಾಡಬೇಕು. ಆ ಪಾತ್ರ ಈ ಪಾತ್ರ ಅಂತ ಹೋಗಬೇಡ. ಯಾರೂ ಇಂತಹದೇ ಪಾತ್ರ ಬೇಕೂಂತ ಹಠ ಮಾಡಬಾರದು. ಸಿಕ್ಕಿದ ಪಾತ್ರ ಮಾಡಬೇಕು' ಅಂತ. ಸಿನಿಮಾ ರಿಲೀಸ್ ಆದಾಗ ವೀಕ್ಷಕರು 'ಸರೋಜಿನಿಗೆ ಚಿಕ್ಕ ಪಾತ್ರ ಆದರೂ ಒಳ್ಳೆಯ ಪಾತ್ರ ಸಿಕ್ಕಿದೆ' ಅನ್ನಬೇಕು. ಮತ್ತು ನನಗೆ ಅದು ಆತ್ಮತೃಪ್ತಿ ಕೊಡಬೇಕು. ನಾನು ಸಿಕ್ಕ ಸಿಕ್ಕ ಪಾತ್ರಗಳನ್ನು ಮಾಡುವುದಿಲ್ಲ ಎಂದುದರಿಂದ ಹೆಚ್ಚು ಅವಕಾಶಗಳು ಸಿಗಲಿಲ್ಲ. ಇನ್ನೊಂದು ಕಾರಣ ನನಗೆ ಕೆಲವು ಅವಕಾಶಗಳು ಬಂದರೂ, ಮನೆಯ ಜವಾಬ್ದಾರಿಯನ್ನು ಬಿಟ್ಟು ಸಿನಿಮಾದ ಹಿಂದೆಯೇ ಹೋಗುವುದು ನನಗೆ ತುಂಬಾ ಕಷ್ಟವಾಗಿತ್ತು. ಬೆಂಗಳೂರಿನಲ್ಲಿ ಬಂದು ಸೆಟ್ಲ್ ಆಗು. ಖಂಡಿತಾ ನಿನಗೆ ಒಳ್ಳೆಯ ಅವಕಾಶ ಸಿಗುತ್ತದೆ. ಸೀರಿಯಲ್‌ನಲ್ಲಿ ಕೆಲಸ ಮಾಡಬಹುದು ಎಂದು ತುಂಬಾ ಜನ ಹೇಳಿದರು. ನಿರ್ದೇಶಕ ಭಾರ್ಗವ ಅವರು ಈಗ ಅತ್ತಿಗೆ, ತಂಗಿ, ನಾದಿನಿ ಇಂತಹದಕ್ಕೆಲ್ಲಾ ತುಂಬಾ ಕೊರತೆ ಇದೆ ಸರೋಜಿನಿ ನೀನು ಬಂದ್ರೆ ಆ ಜಾಗ ತುಂಬಬಹುದು ಎಂದಿದ್ದರು. ಆದರೆ ನನ್ನ ಮನೆಯ ಜವಾಬ್ದಾರಿ ನಾನು ವಾಪಾಸು ಬರುವಂತೆ ಮಾಡಿತು. ನನಗೆ ಸಿನಿಮಾ ರಂಗದಲ್ಲಿ ಮುಂದೆ ಬಂದು ಆರ್ಥಿಕವಾಗಿ ಬೆಳೆಯಬೇಕಾಗಿತ್ತು. ಆದರೆ ತುಂಬಾ ಸಿನಿಮಾಗಳನ್ನು ಮಾಡಿ ಹೆಸರು ಪಡೆಯಬೇಕು ಎಂದು ನಾನು ಈವರೆಗೆ ಹೋಗಿಲ್ಲ. ನಾನು ನನ್ನ ಕುಟುಂಬಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟೆ.

*ಹಿಂದೆ ಆರೂರು ಪಟ್ಟಾಭಿ ಅಥವಾ ಕೆ.ಎನ್. ಟೇಲರ್ ಇರಬಹುದು ಆಗಿನ ಚಲನಚಿತ್ರ, ಅವರು ತಂದ ಆ ಪರಿಸ್ಥಿತಿ ಮತ್ತು ಈಗ ಬರುವ ಚಲನಚಿತ್ರಗಳು ನಿಮಗೆ ಹೇಗೆ ಅನಿಸುತ್ತದೆ?*

ಆಗಿನ ಪರಿಸ್ಥಿತಿ ಕುರಿತು ಉದಾಹರಣೆಗೆ ಹೇಳುವುದಾದರೆ ನಾನು 'ತುಳುನಾಡ ಸಿರಿ'ಯಲ್ಲಿ ಅಭಿನಯ ಮಾಡಿದ್ದೆ. ಆ ದಿನಗಳು ಬಹಳ ಕಷ್ಟದ ದಿನಗಳು ಆಗಿದ್ದರಿಂದ ನಾನು ಈ ಫೀಲ್ಡ್‌ಗೆ ಬಂದೆ. ನಾನು ಮತ್ತು ನನ್ನ ತಮ್ಮ ಮಾತ್ರವಿದ್ದೆವು. ನಮ್ಮ ತಾಯಿ, ತಂದೆ ಬೇಗನೆ ನಮ್ಮಿಬ್ಬರನ್ನು ಅಗಲಿದರು. ತಾಯಿ ಬಹಳ ಕಷ್ಟಪಟ್ಟು ವಿದ್ಯಾಭ್ಯಾಸ ಕೊಡಿಸಿದರು. ದೊಡ್ಡವರಾದ ಮೇಲೆ ಜೀವನಕ್ಕಾಗಿ ಏನಾದರೊಂದು ಉದ್ಯೋಗಬೇಕಲ್ಲಾ ಎಂದು ಈ ಕಲಾರಂಗವನ್ನು ಆಶ್ರಯಿಸಿದೆ. ತುಳುನಾಡ ಸಿರಿಯಲ್ಲಿ ಧರ್ಮಸ್ಥಳದ ಅಣ್ಣಪ್ಪಗುಡ್ಡೆ, ಬೋಳದ ಗುಡ್ಡ ಹೀಗೆಲ್ಲಾ ಎಲ್ಲೊಲ್ಲೋ ಶೂಟಿಂಗ್‌ಗೆ ಹೋಗಿದ್ದೆವು. ಅದರಲ್ಲಿ ಮೂರು ಹಾಡುಗಳಿವೆ. ನನಗೆ ಆಗ ಜಾಂಡೀಸ್ ಆಗಿತ್ತು. ಯಾವಾಗಲೂ ಸೋರೆಕಾಯಿ ಪದಾರ್ಥ. ಇಂತಹ ಕಷ್ಟದ ದಿನಗಳಲ್ಲಿಯೂ ಆ ಶೂಟಿಂಗ್‌ಗೆ ಒಂದು ಕ್ಷಣ ಕೂಡಾ ತೊಂದರೆ ಆಗದ ಹಾಗೆ ಹೋಗಿದ್ದೇನೆ. ಯಾಕೆಂದ್ರೆ ಖಂಡಿತಾ ಏನಾದರೂ ದುಡ್ಡು ಬರುತ್ತೆ ಅಂತ. ಆದರೆ ನಿಜವಾಗಿ ನಾನು ಅದರಲ್ಲಿ ಪಡೆದ ಸಂಭಾವನೆ ಅಂದ್ರೆ ಐನೂರು ರೂಪಾಯಿ ಮಾತ್ರ. ನನಗೆ ತಾಯಿ ಹೇಳಿದ ಮಾತು ನೀನು ಕಲಾವಿದೆಯಾಗಿ ಉಳಿಯಬೇಕಾ, ಕಲೆಯನ್ನು ದುಡ್ಡಿಗೋಸ್ಕರ ಮಾಡಬೇಡ. ಅದಕ್ಕೆ ನೀನು ತೋರುವ ಗೌರವ, ಭಕ್ತಿಯಿಂದ ಒಂದಲ್ಲ ಒಂದು ದಿನ ಉನ್ನತ ಮಟ್ಟಕ್ಕೆ ಖಂಡಿತಾ ಏರುತ್ತಿ. ಆದರೆ ದುಡ್ಡಿನ ಹಿಂದೆ ಮಾತ್ರ ಹೋಗಬೇಡ ಎಂದಿದ್ದರು. ನಾನು ಮನೆಗೆ ಹೋಗಿಯೇ ಕವರ್ ಓಪನ್ ಮಾಡಿ ನೋಡುವುದು. ಮನಸ್ಸಿಗೆ ಒಂಥರಾ ಬೇಜಾರು ಅನಿಸುತ್ತಿತ್ತು. ನನಗೆ ಕೊಡುವ ಸಂಭಾವನೆ ಇದೇನಾ? ಆದರೆ ಅವರು ಇಷ್ಟೇ ಕೊಟ್ಟಿದ್ದೆಂದು ಬೇಸರ ಮಾಡುವುದಿಲ್ಲ. ಯಾವ ಸ್ನೇಹದಿಂದ ಮುಂಚೆ ಇದ್ದೇವಾ ಅದೇ ಸ್ನೇಹಾದಲ್ಲಿ ಈಗಲೂ ಇದ್ದೇವೆ. ಸರೋಜಿನಿ ಅಂದರೆ ಗ್ರೇಟ್ ಸ್ಟಾರ್‌ಗಳಾದ ಅಂಬರೀಶ್, ವಿಷ್ಣುವರ್ಧನ್, ಶ್ರೀನಾಥ್, ಪ್ರಭಾಕರ್, ಅಮಿತಾಬ್ ಬಚ್ಚನ್, ಮಮ್ಮುಟ್ಟಿ ಮೊದಲಾದವರ ಜೊತೆ ಕೆಲಸ ಮಾಡಿದ್ದಾರೆ ಅಂತಾರೆ. ಆದರೆ ಆ ಹೊಗಳಿಕೆಗೆ ಸರಿಯಾದ ಒಂದು ಸಂಭಾವನೆ ಕೊಡಬೇಕೂಂತ ಅವರಿಗೆ ಆ ಪ್ರಜ್ಞೆ, ಬುದ್ಧಿ ದೇವರು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು ಅಂತ ನನ್ನ ಮನಸ್ಸಿಗೆ ಬರುತ್ತೆ.

*ನೀವು ತುಳು ಚಲನಚಿತ್ರ ಮತ್ತು ಕನ್ನಡ ಚಲನಚಿತ್ರ ಎರಡರಲ್ಲಿಯೂ ಅಭಿನಯ ಮಾಡಿದ್ದೀರಿ. ಕನ್ನಡ ಚಲನಚಿತ್ರವನ್ನು ಮಾಡುವಾಗ ತುಳುವಿನ ಕಲಾವಿದರು ಬಂದವರಿಗೆ ನಿಮಗೆ ಅಲ್ಲಿ ಏನಾದರೂ ಅಂದರೆ ನಿರ್ದೇಶಕರು ಒಟ್ಟು ಒಂದು ತಂಡ ನಿಮಗೇನಾದರೂ ತಾರತಮ್ಯ ತೋರಿಸುತ್ತಾರೆ ಅಂತ ಏನಾದರೂ ಭಾವನೆ ಬಂದದ್ದೀಯಾ?*

ನಿಜವಾಗಿ ಅದು ನನಗೆ ಬಹಳ ಆಶ್ಚರ್ಯ ಅನಿಸುತ್ತದೆ. ನಾನು ಕನ್ನಡ ಪೀಲ್ಡ್‌ಗೆ ಹೋದಾಗ ಮೊದಲ ಚಲನಚಿತ್ರ ಮಾಡಿದ್ದು 'ಮಾತೃವಾತ್ಸಲ್ಯ.' ಅದರಲ್ಲಿ ಲಕ್ಷ್ಮೀ, ನಾನು, ಪ್ರಭಾಕರ್, ಶ್ರೀನಾಥ್. ಬೆಂಗಳೂರಿನ ಅಬ್ಬಯ್ಯ ನಾಯ್ಡು ಸ್ಟುಡಿಯೋದಲ್ಲಿ ನಾನು ಹೊಸಬಳಾದರೂ ಯಾರೂ ನನ್ನಲ್ಲಿ ತಾರತಮ್ಯ ತೋರಿಸಲಿಲ್ಲ. ಬಹಳ ಗೌರವವಾಗಿಯೇ ನೋಡಿಕೊಂಡರು.

ಎಲ್ಲರ ಜೊತೆಗೇನೆ ಊಟಕ್ಕೆ ಕೂರಿಸುತ್ತಿದ್ದರು. ಬೇರೆ ಸಪೋರ್ಟಿಂಗ್ ರೋಲ್ ಮಾಡಲು ಬರುವವರನ್ನು ತೆಂಗಿನ ಮರದ ಬುಡದಲ್ಲಿ ಕೂರಿಸಿದರೆ ನನಗೆ ಟೇಬಲ್‌ನಲ್ಲಿ ಕೂರಿಸುತ್ತಿದ್ದರು. ಆ ವಿಷಯದಲ್ಲಿ ಬಹಳ ಲಕ್ಕೀ ನಾನು. ನನ್ನಗೆ ತಾರತಮ್ಯ ಮಾಡಲೇ ಇಲ್ಲ. ನನ್ನನ್ನು ಎಲ್ಲರು ತುಂಬಾ ಗೌರವವಾಗಿ ನೋಡಿಕೊಂಡಿದ್ದಾರೆ. ಕಲಾರಂಗದಲ್ಲಿ ನಾನು ಮಾಡಿದ ಸಂಪಾದನೆ ಆರ್ಥಿಕವಾದುದು ಅಲ್ಲ ಬದಲು ಎಲ್ಲಿ ಹೋದರೂ ಸಿಗುವ ಗೌರವ.

*ನೀವು ಬಂದ ಕಾಲಘಟ್ಟ, ಬೆಳೆದು ಬಂದ ರೀತಿ, ನೀವು ನಿಮ್ಮತನವನ್ನು ಉಳಿಸಿಕೊಂಡು ಕುಟುಂಬಕ್ಕೆ ಪ್ರಾಶಸ್ತ್ಯ ನೀಡಿ ಒಂದು ಗೌರವದ ವಾತಾವರಣದಲ್ಲಿ, ತಮ್ಮ ಗೌರವವನ್ನು ಕಾಪಾಡಿಕೊಂಡು ಪ್ರಬುದ್ಧ ನಟಿಯಾಗಿದ್ದೀರಿ. ಹಿರಿಯ ನಟಿಯಾಗಿ, ಈಗಿನ ನಟಿಯರಿಗೆ ನಿಮ್ಮ ಕಿವಿ ಮಾತು ಏನು?*

ಸರೋಜಿನಿ ಶೆಟ್ಟಿ : ಈಗಿನ ಹೊಸ ಕಲಾವಿದರಲ್ಲಿ ಕೆಲವರು ಇನ್ನೊಬ್ಬ ಹಿರಿಯ ಕಲಾವಿದರೊಡನೆ ವ್ಯವಹರಿಸುವ ರೀತಿ ನೋಡುವಾಗ ಮನಸ್ಸಿಗೆ ತುಂಬಾ ಬೇಜಾರು ಆಗುತ್ತದೆ. ಗೌರವ, ಶಿಸ್ತು, ನಿಯತ್ತು ಅನ್ನುವುದು ಈಗಿನ ಕಲಾವಿದರಲ್ಲಿ ಬಹಳ ಕಡಿಮೆ. ಎಲ್ಲಾ ಕಲಾವಿದರ ಕುರಿತು ಹೇಳುತ್ತಿಲ್ಲ. ಕಲೆ ಅನ್ನುವುದು ಸಾಗರ. ಇದರಲ್ಲಿ ಪರಿಪೂರ್ಣತೆ ಪಡೆದವರು ಯಾರೂ ಇಲ್ಲ. ಯಾರೇ ಕಲಾವಿದರಾಗಲಿ, ಎಷ್ಟೊಂದು ಮುಂದೆ ಹೋದರೂ ಅದು ಮುಗಿಯದಂತಹ ಒಂದು ಪಯಣ. ಕಲಾವಿದರು ವೇದಿಕೆಯಲ್ಲಿ ಸರಿಯಾಗಿ ಅಭಿನಯಿಸುವುದಿಲ್ಲ, ಏನೋ ತಪ್ಪಿದ್ದಾನೆ ಅಂದರೆ ತುಚ್ಛ ಮಾತುಗಳಿಂದ ಹೀನಾಯಗೊಳಿಸದೇ ಒಳ್ಳೆಯ ರೀತಿಯಿಂದ ಮನವರಿಕೆ ಮಾಡಿ ಕೊಡಬೇಕು. ಆಗ ಕಲಾವಿದ ಒಳ್ಳೆಯ ರೀತಿಯಲ್ಲಿ ಬೆಳೆಯಲು ಸಾಧ್ಯ.

*ಸರಕಾರದಿಂದ ಕಲಾವಿದರಿಗೆ ಸಿಗುವ ಸಹಕಾರ, ಕನ್ನಡ ರಂಗಭೂಮಿಗೆ, ಕನ್ನಡ ಚಲನಚಿತ್ರ ಕ್ಷೇತ್ರಕ್ಕೆ ಸಿಗುವಂತಹ ಮನ್ನಣೆ, ತುಳು ರಂಗಭೂಮಿ ಮತ್ತು ತುಳು ಚಲನಚಿತ್ರಕ್ಕೆ ಸಿಗುತ್ತಿದೆಯೇ? ನಿಮ್ಮ ಅನಿಸಿಕೆ ಏನು?*

ಸರೋಜಿನಿ ಶೆಟ್ಟಿ : ಸರಕಾರದಿಂದ ಸಿಗುತದೆ ಎಂದು ನನ್ನ ಭಾವನೆ. ಯಾಕೆಂದರೆ ಹಿಂದೆ ವರ್ಷಕ್ಕೆ ಒಂದೆರಡು ತುಳು ಸಿನಿಮಾಗಳು ಬರುತ್ತಿದ್ದವು. ಆದರೆ ಈಗ ಒಂದೇ ತಿಂಗಳಲ್ಲಿ ಆರು ಸಿನಿಮಾ ಸೆಟ್ಟೇರಿವೆ. ಇಷ್ಟೆಲ್ಲಾ ಮಾಡಬೇಕಾದರೆ ಖಂಡಿತಾ ಅದಕ್ಕೆ ಸರಕಾರದಿಂದ ಪ್ರಾಶಸ್ತ್ಯ ಸಿಗುತ್ತದೆ ಎಂಬ ಭಾವನೆ ನನ್ನದು.

# ‘ಗಾಂಧಿಗೆ ಸಾವಿಲ್ಲ’-ಒಂದು ಅನುಭವ



ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮದ ಬಳಿಕ ಕೆಳಗೆ ಸೌಟು ಹಿಡಿದು ಆಹಾರ ಬಡಿಸುತ್ತಿದ್ದ ರಂಗ ಕರ್ಮಿ ಶಿವಾನಂದ ಇಂಗಳೇಶ್ವರ ನಿಂತಿದ್ದರು. ನನ್ನನ್ನು ಕರೆದು ಹೇಳಿದರು. ಜನವರಿ 29ರಂದು ನಾಟಕ. ಎಂದಿನಂತೆ ನಿಮಗೊಂದು ಪಾತ್ರವಿದೆ. ನಾಟಕದ ಹೆಸರು ‘ಗಾಂಧಿಗೆ ಸಾವಿಲ್ಲ’ ಎಂದರು. ತಕ್ಷಣ ನನಗೆ ಇವರೂ ಕೂಡಾ ಗಾಂಧಿಗಿಂತ ಭಿನ್ನರಲ್ಲ ಅಂತ ಅನಿಸಿತು. ರಂಗ ತಾಲೀಮಿನಲ್ಲಿ ಶಿಸ್ತಿನ ನಿರ್ದೇಶಕ. ಉಳಿದ ಸಮಯದಲ್ಲಿ ಸೌಟು ಹಿಡಿಯಲೂ ಅಳುಕಿಲ್ಲ. ಉದಾತ್ತ ಚಿಂತನೆ ಮತ್ತು ಸರಳ ಜೀವನ ಮಹಾತ್ಮ ಗಾಂಧಿ ಅವರ ನಿಲುವೂ ಆಗಿತ್ತು.

ಗಾಂಧಿ ಸಾವಿಗೀಡಾಗಿದ್ದು ಜನವರಿ 30ರಂದು. ಅದರ ಹಿಂದಿನ ದಿನ ‘ಗಾಂಧಿಗೆ ಸಾವಿಲ್ಲ’ ನಾಟಕ ಪ್ರದರ್ಶನ. ನಿಜಕ್ಕೂ ಇದು ಸದಾಶಯದ ಅರ್ಥಪೂರ್ಣ ಯೋಜನೆ ಎನಿಸಿತು.

ಗಾಂಧಿಗೆ ಸಾವಿಲ್ಲ ನಾಟಕ ಮೂಲತಃ ಪ್ರೊ. ಅಸ್ಗರ್ ವಜಾಹತ್ ಅವರ ಹಿಂದಿ ನಾಟಕ. ಹಿಂದಿಯ ‘ಗೋಡಸೆ@ಗಾಂಧಿ.ಕಾಮ್’ನ ನಾಟಕವನ್ನು ಹಸನ್ ನಯೀಂ ಸುರಕೋಡ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಕರ್ನಾಟಕದಲ್ಲಿ ಇದರ ಪ್ರಯೋಗವಾಗಿದೆ. ಆದರೆ ದೆಹಲಿಯಲ್ಲಿ ಕನ್ನಡದಲ್ಲಿ ಪ್ರಯೋಗವಾಗಿದ್ದು ಪ್ರಥಮ ಬಾರಿ. ಸುಮಾರು ಎರಡು ಗಂಟೆಗೂ ಅಧಿಕ ಅವಧಿಯ ಈ ನಾಟಕವನ್ನು ರಂಗದ ಮೇಲೆ ತರುವುದು ಒಂದು ಪಂಥಾಹ್ವಾನ. ಆದರೆ ಹಿಂದೆ ‘ಉರುಗವ್ವ’ ಎಂಬ ಸುದೀರ್ಘ ಅವಧಿಯ ನಾಟಕವನ್ನು ಇಂಗಳೇಶ್ವರ ಅವರು ನಿರ್ದೇಶಿಸಿದ್ದರು. ಇದರಿಂದ ನನಗೆ ವಿಶ್ವಾಸವಿತ್ತು. ಆದರೆ ತಾಲೀಮಿಗೆ ಹೆಚ್ಚು ದಿನಗಳು ಇಲ್ಲ ಎಂಬುದು ನನ್ನ ಆತಂಕವಾಗಿತ್ತು.

ನಾಟಕದಲ್ಲಿ ನನಗೆ ಪತ್ರಕರ್ತನ ಕಿರುಪಾತ್ರ. ಒಂದೇ ದೃಶ್ಯ. ಆದರೆ ಮಾಧ್ಯಮಗಳ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಗಾಂಧಿ ಹೆಚ್ಚಿನ ಒತ್ತು ನೀಡಿದ್ದರು ಎಂಬ ಅರಿವು ನನಗಿತ್ತು. ಆದ್ದರಿಂದ ಇದನ್ನು ಗಂಭೀರವಾಗಿಯೇ ಪರಿಗಣಿಸಿದ್ದೆ. ಎರಡನೇ ರಿಹರ್ಸಲ್‌ನಲ್ಲೇ ನನ್ನ ಸಂಭಾಷಣೆ ಕಂಠಪಾಠವಾಗಿದ್ದು ನಿರ್ದೇಶಕರಿಗೆ ಖುಷಿ ಕೊಟ್ಟಿತು.

ಇತಿಹಾಸದಲ್ಲಿ ಗಾಂಧಿ ಅವರು ನಾಥುರಾಮ್ ಗೋಡ್ಸೆಯ ಗುಂಡಿಗೆ ಬಲಿಯಾಗಿ ಹುತಾತ್ಮರಾಗುತ್ತಾರೆ. ಆದರೆ ಈ ನಾಟಕದಲ್ಲಿ ಗಾಂಧಿ ಹಲ್ಲೆಗೊಳಗಾಗಿ ಬದುಕಿ ಉಳಿಯುತ್ತಾರೆ. ಅವರ ಬ್ರಹ್ಮಚರ್ಯ, ಅಹಿಂಸೆ, ಸ್ವಚ್ಛತೆ, ಗ್ರಾಮಜೀವನ, ಸ್ವರಾಜ್ಯ ಈ ವಿಚಾರಧಾರೆಗಳು ನಾಟಕದ ತುಂಬಾ ಹರಡಿಕೊಳ್ಳುತ್ತದೆ. ಗಾಂಧಿ ಒಂದೊಮ್ಮೆ ಬದುಕಿ ಉಳಿದಿದ್ದರೆ ಏನಾಗುತ್ತಿತ್ತು ಎಂಬ ಸಕಾರಾತ್ಮಕ ನಿಲುವಿನೊಂದಿಗೆ ವಜಾಹತ್ ನಾಟಕ ರಚಿಸಿದ್ದಾರೆ. ನಾಟಕದ ಕೊನೆಯಲ್ಲಿ ಗೋಡ್ಸೆ ಗಾಂಧಿಯನ್ನು ಹಿಂಬಾಲಿಸುತ್ತಾನೆ. ಗಾಂಧಿ ವಿಚಾರಧಾರೆಗಳನ್ನು ಪಾತ್ರಗಳ ಮೂಲಕ ಹೇಳಿಸುವಾಗ ಸಪ್ಪೆಯಾಗದಂತೆ ನೋಡಿಕೊಳ್ಳುವುದು ಇಲ್ಲಿನ ಸವಾಲು. ಇದು ಯಶಸ್ವಿಯಾಗಿ ಮೂಡಿ ಬಂದಿದೆಯೇ ಎಂದು ಪರದೆಯ ಹಿಂದೆ ಇದ್ದ ನನಗೆ ಹೇಳುವುದು ಸುಲಭವಲ್ಲ. ಆದರೆ ಪ್ರೇಕ್ಷಕರ ಕರತಾಡನ ಪ್ರತೀ ದೃಶ್ಯಗಳು ಪರಿಣಾಮಕಾರಿಯಾಗಿತ್ತು ಅಂತ ಹೇಳುತ್ತಿತ್ತು.

ಐತಿಹಾಸಿಕ ನಾಟಕಗಳನ್ನು ಮಾಡುವಾಗ ಪಾತ್ರಗಳ ಹಂಚಿಕೆ ಇನ್ನೊಂದು ಸವಾಲು. ಇಲ್ಲಿ ಎತ್ತರದ ನಿಲುವಿನ ಗೆಳೆಯ ಕೃಷ್ಣರಾಜ್ ನೆಲ್ಲಿ ಗಾಂಧಿ ಪಾತ್ರಕ್ಕೆ ಹೇಳಿ ಮಾಡಿಸಿದಂತೆ ಇದ್ದರು. ಅವರ ಕೇಶರಹಿತ ಶಿರ ಒಂದು ವರದಾನ. ರಿಹರ್ಸಲ್‌ನಲ್ಲಿ ಕೃಷ್ಣರಾಜ್ ಸೇರಿದಂತೆ ಮಿತ್ರರಾದ ಬಿ.ಕೆ. ಬಸವರಾಜ್(ಸರ್ದಾರ್ ಪಟೇಲ್), ಹರಿಪ್ರಿಯ (ಮೌಲಾನಾ ಅಜಾದ್), ಡಿಕ್ಸನ್ ಡಿ'ಸೋಜ (ನೆಹರು), ಅಮರೇಶ್ (ಗೋಡ್ಸೆ), ನಾರಾಯಣ (ನಾನಾಅಪ್ಟೆ), ಡಾ. ಎಸ್.ಎಲ್. ಭಂಡಾರ್‌ಕರ್ (ವಿಷ್ಣು ಕರಕರೆ), ಬಸವಣ್ಣಿ ಹುಂಡ್ರಿ (ಬಾವನ್ ದಾಸ್), ಸಖಾರಾಮ ಉಪ್ಪೂರು (ಜೈಲರ್), ಅರುಣ್ (ರಿಪೋರ್ಟರ್), ಅರವಿಂದ ಬಿಜ್ಜೆ (ಪ್ಯಾರೇಲಾಲ್), ಶ್ರೀ ಜಗದೀಶ್ ಗೌಡ (ಸಿ. ಬಾಬು) ಲವಲವಿಕೆಯಿಂದ ಭಾಗವಹಿಸಿದ್ದರು. ಸಂತೋಷ್ ಉಪಾಧ್ಯಾಯ ಅವರ ನಾಟಕದ ನಡುವೆ ಕೇಳಿ ಬರುತ್ತಿದ್ದ ಉದ್ಘೋಷಣೆ ಕುತೂಹಲ ಹುಟ್ಟಿಸುವಂತಿತ್ತು.

ಗಾಂಧೀಜಿಯ ಬ್ರಹ್ಮಚರ್ಯ ಪಾಲನೆಯನ್ನು ಬಿಂಬಿಸುವ ಪಾತ್ರಗಳಾಗಿ ಮಂಜುಳಾ ನಾಗರಾಜ (ನಿರ್ಮಲಾದೇವಿ), ವಿಷ್ಣು ನೆಲ್ಲಿ (ಪ್ರೊ. ನವೀನ್ ಜೋಷಿ) ಹಾಗೂ ಶಿಲ್ಪ ಹರಿಪ್ರಿಯ (ಸುಷ್ಮಾ), ಆಶ್ರಮವಾಸಿಗಳಾಗಿ ಜಯಶ್ರೀ ಬಸವರಾಜು, ಸವಿತಾ ನೆಲ್ಲಿ ನಾಟಕದ ಯಶಸ್ಸಿಗೆ ಶ್ರದ್ಧೆಯಿಂದ ದುಡಿದಿದ್ದಾರೆ. ರಿಹರ್ಸಲ್‌ನಲ್ಲಿ ಕಸ್ತೂರ್ಬಾ ಪಾತ್ರಧಾರಿಣಿ ಪವಿತ್ರ ನೆಲ್ಲಿ ಗಾಂಧಿ ಪ್ರಯೋಗಗಳಿಂದ ಆದ ನೋವನ್ನು ಹೇಳುವಾಗ ನನ್ನ ಕಣ್ಣು ತೇವಗೊಂಡಿತು.


ಒಂದು ಮಳೆಯ ದೃಶ್ಯಕ್ಕಾಗಿ ಕಲಾವಿದ ಸುಧೀರ್ ಫಡ್ನೀಸ್ ಹಲವು ಚಿತ್ರಪಟಗಳನ್ನು ರಚಿಸಿದ್ದಾರೆ. ಅವರ ರಂಗಸಜ್ಜಿಕೆ ಮತ್ತು ಚರಕವನ್ನು ರಚಿಸಿ ಹವಾಲ್ದಾರ್ ಪಾತ್ರದಲ್ಲಿ ಕಾಣಿಸಿಕೊಂಡ ರಾಘವೇಂದ್ರ ನಾಯಕ್ ಅವರ ಸೃಷ್ಟಿಶೀಲ ಪ್ರತಿಭೆ ಗಮನಾರ್ಹ.

ಬೆಂಗಳೂರಿನ ರಂಗಮಂಟಪ ಕಲಾವಿದ ರಾಜ್‌ಕುಮಾರ್ ಕೊನೆಯ ಹಂತದಲ್ಲಿ ನಮ್ಮ ತಂಡಕ್ಕೆ ಜೊತೆಯಾದರು. ಅವರ ಅಮೂಲ್ಯ ಸಲಹೆಗಳು ನಮಗೆ ಉತ್ತೇಜನ ನೀಡಿತು. ದೆಹಲಿ ಕರ್ನಾಟಕ ಸಂಘದಲ್ಲಿ ಭಾನುವಾರ ಸಂಜೆ ಅವರು ನಾಟಕದ ಬೆಳಕಿನ ನಿರ್ವಹಣೆ ಜೊತೆಗೆ ಗೆಳೆಯ ಶಶಿಕಾಂತ್ ಪಾಟೀಲರೊಂದಿಗೆ ಪ್ರಸಾದನ ಕಲೆಯಲ್ಲೂ ಸಹಕರಿಸಿದ್ದರು. ಇದನ್ನು ಹೇಗೆ ಮರೆಯಲು ಸಾಧ್ಯ? ಅ

**ಡಾ. ಅವನೀಂದ್ರನಾಥ್ ರಾವ್**



# "ಇದು ಪ್ರದರ್ಶನವಲ್ಲ, ಪ್ರಯೋಗ"



ಎಲ್ಲಿಯ ಗಾಂಧಿ, ಎಲ್ಲಿಯ ಗೋಡ್ಸೆ
ಅವನ ಕೈ ಇವನ ಹೆಗಲ ಮೇಲೆ
ಹಿಂಬಾಲಿಸಿತು ಹೆಜ್ಜೆಯ ಹೆಜ್ಜೆ
ಶಾಂತವಾಯಿತು ಇವನ ಕಣ್ಣ ಜ್ವಾಲೆ

ಪ್ರತಿಯೊಬ್ಬ ಸಹೃದಯ ಪ್ರೇಕ್ಷಕನನ್ನು ಒಂದು ಕ್ಷಣ ಭಾವುಕಗೊಳಿಸಿದ ಹಸನ್ ನಯೀಂ ಸುರಕೋಡ ಅವರ 'ಗಾಂಧಿಗೆ ಸಾವಿಲ್ಲ' ಎಂಬ ನಾಟಕದ ಕೊನೆಯ ಕ್ಷಣವಿದು. ಮೂಲತಃ ಅಸ್ಗರ್ ವಜಾಹತ್ ಅವರ ಗೋಡಸೆ@ಗಾಂಧಿ.ಕಾಮ್ ಹಿಂದಿ ನಾಟಕದ ಕನ್ನಡಾನುವಾದವಿದು. ಜನವರಿ 29ರಂದು ದೆಹಲಿ ಕರ್ನಾಟಕದ ಸಭಾಂಗಣದಲ್ಲಿ ದಿನಕರ ತಂಡದ ಈ ಅಪರೂಪದ ನಾಟಕಕ್ಕೆ ದೆಹಲಿ ಕರ್ನಾಟಕ ಸಂಘ ವೇದಿಕೆ ಕಲ್ಪಿಸಿಕೊಟ್ಟಿತು.

ನಾಟಕದ ವಸ್ತು ಇತಿಹಾಸದ ಮರು ವ್ಯಾಖ್ಯಾನವನ್ನು ಒಳಗೊಳ್ಳುವುದರ ಜೊತೆಗೆ ಸಮಕಾಲೀನ ಸಮಾಜವನ್ನು ಪ್ರತಿಬಿಂಬಿಸುವಂತಿತ್ತು. ಧರ್ಮಪರ ಜೀವನ ನಡೆಸುತ್ತಿದ್ದ, ಮನಸ್ಸಿನ ಅತ್ಯಂತ ಶ್ರೇಷ್ಠ ಸ್ಥಿತಿಯಾದ 'ಶಾಂತಿ'ಯ ಪರಿಪಾಲಕರಾದ ಗಾಂಧೀಜಿ ಹಾಗೂ ತನ್ನದೇ ಆದ ಆದರ್ಶದ ಗೋಡೆಗಳನ್ನು ಕಟ್ಟಿಕೊಂಡಂತಹ ಗೋಡ್ಸೆಯ ನಡುವೆ ನಡೆಯುವಂತಹ ವೈಚಾರಿಕ ಭಾವನೆಗಳು ಇಡೀ ನಾಟಕದುದ್ದಕ್ಕೂ ಪ್ರಕಟಗೊಳ್ಳುತ್ತದೆ. ಇದರೊಂದಿಗೆ ಇತಿಹಾಸದ ಬಗ್ಗೆಗಿರುವ ಪ್ರೇಕ್ಷಕನ ಪ್ರಜ್ಞೆಯು ವಿಸ್ತಾರವಾಗುತ್ತ ಹೋಗುತ್ತದೆ. ಎಷ್ಟೋ ಸಂಕೀರ್ಣ ದೃಶ್ಯಗಳು, ಸಂದರ್ಭಗಳು ಹಾಗೂ ರಾಜಕೀಯ ಚಟುವಟಿಕೆಗಳನ್ನು ಒಳಗೊಂಡಿರುವ ನಾಟಕದಲ್ಲಿ ಮುಂದೆ ಏನಾಗುತ್ತದೆ ಎನ್ನುವುದಕ್ಕಿಂತ ನಾಟಕ ಏನು ಹೇಳುತ್ತದೆ ಎಂಬ ಕುತೂಹಲ ಹೆಚ್ಚಾಗಿಸುವಂತಿತ್ತು.

ಮನರಂಜನೆಯ ಉದ್ದೇಶವನ್ನಿಟ್ಟುಕೊಂಡು ಬಂದಂತಹ ಪ್ರೇಕ್ಷಕನಿಗೆ ವೈಚಾರಿಕತೆ ಹಾಗೂ ಗಂಭೀರ ಜೀವನ ದರ್ಶನವಿರುವ ಈ ನಾಟಕವನ್ನು ಅರಗಿಸಿಕೊಳ್ಳಲು ತುಸು ಕಷ್ಟವಾಗಿರಬಹುದು. ಆದರೂ ಪ್ರತಿಯೊಬ್ಬನನ್ನು ಚಿಂತನೆಗೆ ಹಚ್ಚಿ ಒಂದು ಹೊಸ ಪ್ರೇಕ್ಷಕ ವರ್ಗವೊಂದನ್ನು ಈ ನಾಟಕ ಸೃಷ್ಟಿಸಿದೆ ಎನ್ನುವುದು ಸಂತಸ ವಿಚಾರ. "ಇದು ಪ್ರದರ್ಶನವಲ್ಲ, ಪ್ರಯೋಗ" ಎಂದ ನಿರ್ದೇಶಕರು ಹೊಸ ಬಗೆಯ ನಾಟಕದ ಪ್ರದರ್ಶನದ ಪ್ರಯತ್ನಕ್ಕೆ ಮುಂದಾದುದು ಶ್ಲಾಘನೀಯ. ಇಂತಹ ಪ್ರಯೋಗಗಳೇ ಹೆಚ್ಚೆಚ್ಚು ಪ್ರೇಕ್ಷಕರನ್ನು ಆಕರ್ಷಿಸುತ್ತದೆ ಎಂಬುವುದಕ್ಕೆ ಪ್ರದರ್ಶನಕ್ಕೆ ಸೇರಿದಂತಹ ದೆಹಲಿಯ ವಿಚಾರಪರ, ವಿದ್ಯಾವಂತ, ಬುದ್ಧಿವಂತ ಕಲಾಭಿಮಾನಿಗಳೇ ಸಾಕ್ಷಿ. ಹಾಗೆಯೇ ಕನ್ನಡ ರಂಗಭೂಮಿ ಬೆಳವಣಿಗೆಯಲ್ಲಿ ದೆಹಲಿ ಕರ್ನಾಟಕ ಸಂಘವೂ ಪಾತ್ರವಹಿಸುತ್ತಿರುವುದು ಅಭಿಮಾನದ ಸಂಗತಿ.

ಎಲ್ಲರಿಗೆ ಒಂದೇ ಅರ್ಥ ನೀಡದೇ ವಿಭಿನ್ನ ಅರ್ಥಗಳನ್ನು ನೀಡುವಂತಹ ಈ ನಾಟಕದಲ್ಲಿ ಪ್ರಧಾನ ಪಾತ್ರವಹಿಸಿದ್ದು ಗಾಂಧಿ–ಗೋಡ್ಸೆಯ ಸಂವಾದ. ಈ ಪಾತ್ರಗಳಿಗೆ ಸಮರ್ಥವಾಗಿ ಜೀವ ತುಂಬಿದವರು ಕೃಷ್ಣರಾಜ್ ಕೆ.ಎನ್ ಹಾಗೂ ಅಮರೇಶ್ ಹೆಚ್. ಮಾತ್ರವಲ್ಲ ಇಲ್ಲಿನ ಎಲ್ಲಾ ಪಾತ್ರಗಳು ಹವ್ಯಾಸಿ ರಂಗಭೂಮಿಯ ಕಲಾವಿದರಾದ ಸವಾಲಿನದಾಗಿತ್ತು. ಸುಮಾರು ಎರಡೂವರೆ ಗಂಟೆ ಕಾಲ ಪ್ರದರ್ಶನಗೊಂಡ ಈ ನಾಟಕಕ್ಕಾಗಿ 23 ಕಲಾವಿದರು ಬಣ್ಣ ಹಚ್ಚಿದ್ದಾರೆ.

ನಿರ್ದೇಶಕರ ಯೋಜನೆಯಂತೆ ಕೊನೆಗೂ ನಾಟಕ ಸಫಲಗೊಂಡಿತು. ರಂಗಸಜ್ಜಿಕೆ ಹಾಗೂ ಬೆಳಕು ಒಟ್ಟು ನಾಟಕದ ಆಶಯಕ್ಕೆ ಇನ್ನಷ್ಟು ಪೂರಕವಾಗಿತ್ತು. ಈ ನಾಟಕದಲ್ಲಿ ನನ್ನಂತಹ ಹಲವಾರು ಹೊಸ ಮುಖಗಳಿಗೆ ಬಣ್ಣ ಹಚ್ಚುವ ಸಾಹಸಕ್ಕೆ ಕೈ ಹಾಕಿದ ನಿರ್ದೇಶಕರಾದ ಶಿವಾನಂದ ಇಂಗಳೇಶ್ವರವರ ಧೈರ್ಯವನ್ನು ಮೆಚ್ಚಲೇಬೇಕು. ನಿರಂತರ ಎರಡು ತಿಂಗಳಲ್ಲಿ ಅವರ ನಾಟಕ ಪ್ರಯೋಗ ಶಾಲೆಯಲ್ಲಿ ನಾವು ಕಲಿತದ್ದು ಅಪಾರ. ಹೆಗಲ ಮೇಲೆ ಕೈ ಇರಿಸಿದಂತಹ ಆತ್ಮೀಯತೆಯ, ಅಪೂರ್ವ ವ್ಯಕ್ತಿತ್ವದ ನಿರ್ದೇಶಕರಿಗೆ ಮತ್ತು ಹಿನ್ನಲೆ ಸಂಗೀತ, ಧ್ವನಿ, ಬೆಳಕು, ಪ್ರಸಾದನ, ರಂಗಪರಿಕರಗಳಲ್ಲಿ ಸಹಕರಿಸಿ ನಾಟಕದ ಯಶಸ್ಸಿಗೆ ಕೈಗೂಡಿಸಿದಂತಹ ಸಂತೋಷ್ ಉಪಾಧ್ಯಾಯ, ಸುಧೀರ್ ಫಡ್ನೀಸ್, ರಾಜಕುಮಾರ್, ಶಶಿಕಾಂತ್ ಪಾಟೀಲ್ ಹಾಗೂ ಅರುಣ್ ಅವರಿಗೆ ಅಭಿನಂದನೆಗಳು. ಅ

**ಅರವಿಂದ ಬಿಜ್ಜೆ**

# ಗಾಂಧಿಗೆ ಸಾವಿಲ್ಲ ಪ್ರಯೋಗದ ಕುರಿತು ಒಂದು ಚಿಂತನೆ

ಮಹಾತ್ಮ ಗಾಂಧಿ ಅವರ ಪುಣ್ಯತಿಥಿಯ ಹಿಂದಿನ ದಿನವಾದ ದಿನಾಂಕ 29.01.2017ರಂದು ಸಂಜೆ 'ದಿನಕರ' ತಂಡ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಪ್ರಸ್ತುತಪಡಿಸಿದ ನಾಟಕ 'ಗಾಂಧಿಗೆ ಸಾವಿಲ್ಲ' ಒಂದು ಸುದೀರ್ಘ ಹಾಗೂ ಗಂಭೀರ ಪ್ರಯೋಗವಾಗಿತ್ತು. ಮೂಲತಃ ಅಸ್ಗರ್ ವಜಾಹತ್ ಅವರ ಹಿಂದಿ ನಾಟಕ 'ಗೋಡಸೆ@ಗಾಂಧಿ.ಕಾಮ್' ಅನ್ನು ಹಸನ್ ನಯೀಂ ಸುರಕೋಡ ಬೆಳಗಾವಿ ಅವರು ಕನ್ನಡಕ್ಕೆ ಅನುವಾದಿಸಿದ್ದು, 2016ರಲ್ಲಿ ರಂಗಮಂಟಪ, ಬೆಂಗಳೂರು ಇವರಿಂದ 'ರಂಗ ಪ್ರಶಸ್ತಿ' ಪಡೆದ ನಿರ್ದೇಶಕ ಶ್ರೀ ಶಿವಾನಂದ ಇಂಗಳೇಶ್ವರ, ಅವರು ಅತ್ಯಂತ ಶ್ರಮವಹಿಸಿ ರಂಗದ ಮೇಲೆ ತರುವ ಪ್ರಯತ್ನ ಮಾಡಿದ್ದಾರೆ. ದೆಹಲಿಯಲ್ಲಿನ ರಂಗಾಸಕ್ತರನ್ನು ಒಟ್ಟುಗೂಡಿಸಿ 'ದಿನಕರ' (ದಿಲ್ಲಿ ನಗರ ಕನ್ನಡ ಕಲಾವಿದರ ಸಂಘ) ತಂಡದಿಂದ ಈಗಾಗಲೇ 'ನಾ ಸತ್ತಿಲ್ಲ', 'ಉರುಗವ್ವ' ಹಾಗೂ 'ರಕ್ತರಾತ್ರಿ' ಇನ್ನಿತರ ಹಲವಾರು ಪ್ರಯೋಗಗಳನ್ನು ಮಾಡಿ ದೆಹಲಿಯ ರಂಗಪ್ರಿಯರಿಗೆ ನೀಡಿರುವ ಇಂಗಳೇಶ್ವರರು ಈ ಬಾರಿ ಯಾಕೋ ಅತ್ಯಂತ ಮಹತ್ವಾಕಾಂಕ್ಷಿ ಯೋಜನೆಯೊಂದನ್ನು ಕೈಗೆತ್ತಿಕೊಂಡಂತೆ ಅನ್ನಿಸಿತು. ನಾಟಕದ ಮುಖ್ಯ ಪಾತ್ರಗಳಾದ ಗಾಂಧಿ ಹಾಗೂ ಗೋಡ್ಸೆಯಾಗಲಿ ಅಥವಾ ಪೂರಕ ಮತ್ತು ಸಹಾಯಕ ಪಾತ್ರಗಳಾದ ಬಾವನ್‌ದಾಸ್, ನಿರ್ಮಲ ಮತ್ತು ಪ್ಯಾರೇಲಾಲ್ ಸೇರಿದಂತೆ ಇನ್ನೆಲ್ಲಾ ಪಾತ್ರಗಳು ಸಹ ತಾಲೀಮಿನ ಕೊರತೆಯಿಂದ ಸೊರಗಿದ್ದು ಎದ್ದು ಕಾಣುತ್ತಿತ್ತು. ವೇಷ ಭೂಷಣ, ಪ್ರಸಾದನ ಮತ್ತು ರಂಗಸಜ್ಜಿಕೆ ಪರಿಣಾಮಕಾರಿಯಾಗಿ ಕಾಣಿಸಿಕೊಂಡಿದ್ದರೂ ಗೋಡ್ಸೆಯನ್ನು ಇಟ್ಟ ಜೈಲು ಮತ್ತು ಆತನಿಗೆ ತೊಡಿಸಿದ ಸರಪಳಿಗಳು ಕೇವಲ ಸಾಂಕೇತಿಕವಾಗಿ ಅಷ್ಟೇ ಕಾಣಿಸಿಕೊಂಡವು. ಜೊತೆಗೆ ಇಂತಹ ಗಂಭೀರ ನಾಟಕಕ್ಕೆ ಮೊದಲಿಂದ ಕೊನೆಯವರೆಗೆ ಒಂದು ಪರಿಣಾಮಕಾರಿಯಾದ ಹಿನ್ನೆಲೆ ಸಂಗೀತದ ಕೊರತೆ ಕೂಡಾ ಎದ್ದು ಕಾಣಿಸುತ್ತಿತ್ತು. ಧ್ವನಿ ಮತ್ತು ಬೆಳಕಿನ ವ್ಯವಸ್ಥೆ ಕೂಡಾ ನಾಟಕದ ಒಟ್ಟಾರೆ ಪ್ರದರ್ಶನಕ್ಕೆ ಬೇಕಾಗುವಷ್ಟು ಪರಿಣಾಮಕಾರಿಯಾಗಿರಲಿಲ್ಲ.

ಆದಾಗ್ಯೂ ದೆಹಲಿಯಂತಹ ಒಂದು ಬ್ಯುಸಿ ಮಹಾನಗರದಲ್ಲಿ ಸುಮಾರು 20–25 ಹವ್ಯಾಸಿಗಳನ್ನು ಒಟ್ಟುಗೂಡಿಸಿ ಇಂತಹ ಒಂದು ಗಂಭೀರ ವಸ್ತುವನ್ನುಳ್ಳ ನಾಟಕವನ್ನು ಮಾಡಲು ಕೈ ಹಾಕಿದ ದಿನಕರ ತಂಡದ ಸಾಹಸವನ್ನು ಮೆಚ್ಚಲೇಬೇಕಾಗಿದೆ. ನಿರ್ದೇಶಕ ಇಂಗಳೇಶ್ವರ ಅವರು ಬಳಸಿದ ವಿಭಿನ್ನ ತಂತ್ರಗಳು ಹಾಗೂ ವಿಶಿಷ್ಟ ಪರಿಕರಗಳು ನಾಟಕದಲ್ಲಿ ಅಲ್ಲಲ್ಲಿ ಎದ್ದು ಕಂಡಿವೆಯಾದರೂ ಒಟ್ಟಾರೆ ನಾಟಕ ಯಾಕೋ ಎಳೆದಂತೆ (Drag) ಅನ್ನಿಸಿತು. ದೆಹಲಿಯ ಬಿರುಸಿನ ಜೀವನದ ನಡುವೆ ಒಂದಿಷ್ಟು ಮನೋರಂಜನೆಗಾಗಿ ನಾಟಕ, ಸಿನೇಮಾಗಳನ್ನು ನೋಡಲು ಬರುವ ಬಹಳಷ್ಟು ಸಾಮಾನ್ಯ ಕನ್ನಡಿಗರಿಗೆ ಈ ನಾಟಕ ಯಾಕೋ ಸಪ್ಪೆ ಅನ್ನಿಸಿತು. ಆದರೆ ದೆಹಲಿಯ ನಮ್ಮವರೇ ಆದ ಸ್ಥಳೀಯ ಕಲಾವಿದರೇ ಕೂಡಿ ಮಾಡಿರುವ ಕಾರಣ ನಾಟಕದ ಕೊನೆಯವರೆಗೂ ಪ್ರೇಕ್ಷಕರು ಕುಳಿತಿದ್ದು ಕಲಾವಿದರನ್ನು ಪ್ರೋತ್ಸಾಹಿಸಿರುವುದು ಒಂದು ನಿಜಕ್ಕೂ ಒಳ್ಳೆಯ ಲಕ್ಷಣ. ಅ

**ಸಖಾರಾಮ ಉಪ್ಪೂರು**



# ‘ಸಂಕ್ರಾಂತಿ ಮಿಲನ’




ಮಕರ ಸಂಕ್ರಾಂತಿ ಪ್ರಯುಕ್ತ ಇದೇ ಜನವರಿ 15ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆದ ‘ಸಂಕ್ರಾಂತಿ ಮಿಲನ’ ಕಾರ್ಯಕ್ರಮದಲ್ಲಿ ಸಂಘದ ಸದಸ್ಯರು ತಮ್ಮ ಪರಿವಾರ ಸಮೇತರಾಗಿ ಬಂದು ಪರಸ್ಪರ ಎಳ್ಳು-ಬೆಲ್ಲ ಹಂಚಿಕೊಂಡು ಶುಭಾಶಯಗಳನ್ನು ಕೋರುವುದರ ಮೂಲಕ ಕರ್ನಾಟಕದ ಸಂಕ್ರಾಂತಿಯ ಸೊಬಗನ್ನು ಮೆರೆದರು.


ಇದೇ ಸಂದರ್ಭದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸ್ಥಳೀಯ ಕಲಾವಿದರು, ಸಂದರ್ಭೋಚಿತವಾಗಿ ವಿವಿಧ ಭಾವಗೀತೆ, ಭಕ್ತಿಗೀತೆ, ತತ್ವಪದ ಹಾಗೂ ಚಲನಚಿತ್ರ ಗೀತೆಗಳನ್ನು ಹಾಡಿ ನೆರೆದಿದ್ದ ಸಭಿಕರನ್ನು ರಂಜಿಸಿದರು. ಕರ್ನಾಟಕ ಸಂಘದ ಸಕ್ರಿಯ ಸದಸ್ಯರಾದ ಶ್ರೀಮತಿ ಮೈಥಿಲಿ ಅತ್ತಾವರ ಮತ್ತು ಶ್ರೀ ಅನಿಲ್ ಅತ್ತಾವರ ಅವರ ಪುತ್ರಿ ಕು. ಸಪ್ನಾ ಅತ್ತಾವರ ಅವರು ವಿಘ್ನರಾಜ ಸ್ತೋತ್ರವೊಂದಕ್ಕೆ ಭರತನಾಟ್ಯ ಮಾಡಿದರೆ ಕರ್ನಾಟಕ ಭವನದಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಶಾರದಾ ಮತ್ತು ಶ್ರೀ ಮಲ್ಲನ ಗೌಡ ಅವರ ಪುತ್ರಿ ಕು. ರಮ್ಯ ಅವರು ಶಾಸ್ತ್ರೀಯವಾಗಿ ಭರತನಾಟ್ಯ ಪ್ರದರ್ಶನ ನೀಡಿ ನೆರೆದ ಸಭಿಕರಿಗೆ ಆನಂದ ನೀಡಿದರು.

ಶ್ರೀ ಚಿದಂಬರ ಕೋಟೆ, ಶ್ರೀ ರಾಜಕುಮಾರ್, ಶ್ರೀಮತಿ ಮಂಜುಳಾ ನಾಗರಾಜ, ಶ್ರೀ ಎ.ಟಿ. ಶ್ರೀನಿವಾಸ, ಶ್ರೀಮತಿ ಶುಭಾ ದೇವಿಪ್ರಸಾದ್, ಶ್ರೀಮತಿ ಮಮತಾ ಪಿ. ಶಿವರಾಜ್, ಶ್ರೀಮತಿ ಜಯಶ್ರೀ ಬಸವರಾಜು, ಶ್ರೀ ಶ್ರೇಯಸ್, ಶ್ರೀ ಅಮರೇಶ್ ಮತ್ತಿತರರು ಸೇರಿ ತಮ್ಮ ಸುಶ್ರಾವ್ಯವಾದ ಕಂಠದಿಂದ ಹಾಡಿ ಸಭಾಂಗಣದಲ್ಲಿ ಕನ್ನಡದ ಕಂಪನ್ನು ಸೂಸಿದರು.

ಪ್ರಾರಂಭದಲ್ಲಿ ಎಲ್ಲಾ ಕಲಾವಿದರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಜೊತೆಗೂಡಿ ತುಳಸಿಗೆ ಆರತಿ ಮಾಡುವುದರ ಮೂಲಕ ವಿನೂತನವಾಗಿ ಕಾರ್ಯಕ್ರಮವನ್ನು ಆರಂಭಿಸಿದರು. ಶ್ರೀಮತಿ ಪೂಜಾ ಪಿ. ರಾವ್ ಅವರು ಕಾರ್ಯಕ್ರಮ ನಿರೂಪಿಸಿದರು. ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಾದ ಶ್ರೀ ಸಖಾರಾಮ ಉಪ್ಪೂರು ಅವರು ಕಾರ್ಯಕ್ರಮದ ಕುರಿತಾಗಿ ಪ್ರಾಸ್ತಾವಿಕ ಮಾತುಗಳನ್ನಾಡಿ ನೆರೆದ ಎಲ್ಲರನ್ನೂ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಧನ್ಯವಾದ ಅರ್ಪಿಸಿದರು. ಅ

***ಸಖಾರಾಮ ಉಪ್ಪೂರು***













# ಸಂಘದ ಕೈರುಚಿ ಆಹಾರ ಮೇಳ ಕನ್ನಡದ ಸಂಸ್ಕೃತಿಯನ್ನು ದೆಹಲಿಯಲ್ಲಿ ಬಿಂಬಿಸುವ ಪ್ರಯತ್ನ-ಸಚಿವ ಟಿ.ಬಿ. ಜಯಚಂದ್ರ

ದೆಹಲಿ ಕರ್ನಾಟಕ ಸಂಘವು 'ಕೈರುಚಿ' ಕರ್ನಾಟಕದ ಆಹಾರ ಮೇಳವನ್ನು ಸಂಘದ ಆವರಣದಲ್ಲಿ ಇದೇ ಜನವರಿ 22ರಂದು ನಡೆಸಿತು. ಈ ಆಹಾರ ಮೇಳದಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸಿದ ಕರ್ನಾಟಕ ಸರ್ಕಾರದ ಕಾನೂನು ಸಚಿವರಾದ ಶ್ರೀ ಟಿ.ಬಿ. ಜಯಚಂದ್ರ ಅವರು ಅವರು ಎಲ್ಲಾ ಮಳಿಗೆಗಳನ್ನು ನೋಡಿ ದೆಹಲಿ ಕನ್ನಡಿಗರನ್ನು ಅಭಿನಂದಿಸಿದರು.

ಅವರು ಸಂಘದ ಸದಸ್ಯರ ಅದ್ಭುತವಾದ ಆಹಾರ ಮೇಳದ ಕಾರ್ಯಕ್ರಮವನ್ನು ಪ್ರಶಂಸಿಸಿದರು. ಕರ್ನಾಟಕದ ಎಲ್ಲಾ ಜಿಲ್ಲೆಗಳ ತಿಂಡಿ ತಿನಿಸುಗಳು ಇಲ್ಲಿ ಪ್ರದರ್ಶನವಾಗಿದ್ದು, ಈ ಆಹಾರಗಳು ನಮ್ಮ ಸಂಸ್ಕೃತಿಯ ಅಂಗವಾಗಿದೆ ಎಂದರು. ಕರ್ನಾಟಕದಿಂದ ಬಹುದೂರ ಬಂದು, ಎಲ್ಲರೂ ಜೊತೆಗೂಡಿ ತಮ್ಮ ಮನೆಯಲ್ಲೇ ಇಷ್ಟು ರುಚಿಯಾದ ಅಡುಗೆಯನ್ನು ಮಾಡಿಕೊಂಡು ಪರಸ್ಪರ ಹಂಚಿಕೊಳ್ಳುವುದದಲ್ಲದೆ ದೇಶದ ರಾಜಧಾನಿಯಲ್ಲಿ ಕನ್ನಡದ ರುಚಿ, ಪರಿಮಳ ಹಾಗೂ ನಮ್ಮ ಸಂಸ್ಕೃತಿಯನ್ನು ಈ ಮೂಲಕ ಕನ್ನಡೇತರರಿಗೆ ಪರಿಚಯಿಸುತ್ತಿರುವುದು ಶ್ಲಾಘನೀಯ ಎಂದರು.

ಕೈರುಚಿ ಆಹಾರ ಮೇಳವನ್ನು ದೆಹಲಿಯ ಪ್ರಸಿದ್ಧ ಹೋಟೇಲು ಉದ್ಯಮಿ ಶ್ರೀ ಪ್ರಭಾಕರ ಬಂಗೇರ ಅವರು ಉದ್ಘಾಟಿಸಿ ಶುಭ ಹಾರೈಸಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತಾ ಕಳೆದ ಎರಡು ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ಈ ವಿಶೇಷ ಆಹಾರಮೇಳವನ್ನು ಮುಂಬರುವ ದಿನಗಳಲ್ಲಿ ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ ದೆಹಲಿಯ ಪ್ರಸಿದ್ಧ ಸ್ಥಳವೊಂದರಲ್ಲಿ ಬೃಹತ್ ರೂಪದಲ್ಲಿ ಆಯೋಜಿಸುವಂತಹ ಯೋಜನೆ ಇದೆ ಎಂದು ನುಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಆಹಾರ ಮೇಳ ಉಪಸಮಿತಿಯ ಅಧ್ಯಕ್ಷರಾದ ಶ್ರೀ ರಾಧಾಕೃಷ್ಣ, ಸಂಚಾಲಕರಾದ ಶ್ರೀಮತಿ ಜಮುನಾ ಸಿ. ಮಠದ ಮತ್ತು ಕಾರ್ಯಕಾರಿ ಸಮಿತಿಯ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರು ಬಹಳ ಮುತುವರ್ಜಿ ವಹಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಕರ್ನಾಟಕದ ವಿವಿಧ ಜಿಲ್ಲೆಗಳ ಸುಮಾರು 28 ಮಳಿಗೆಗಳಲ್ಲಿ 100ಕ್ಕೂ ಹೆಚ್ಚು ರುಚಿಕರವಾದ ಆಹಾರ ಪದಾರ್ಥಗಳನ್ನು ದೆಹಲಿ ಕರ್ನಾಟಕ ಸಂಘದ ಸದಸ್ಯರು ತಮ್ಮ ಮನೆಯಲ್ಲಿ ತಯಾರು ಮಾಡಿಕೊಂಡು ಬಂದ ಈ ವಿಶೇಷ ಖಾದ್ಯ ಪದಾರ್ಥಗಳನ್ನು ಸಾವಿರಾರು ಮಂದಿ ಕನ್ನಡಿಗರು ಮತ್ತು ಕನ್ನಡೇತರರು ಸವಿದರು. ಕೋಲಾರ, ಮೈಸೂರು ಮತ್ತು ಮಂಡ್ಯದಿಂದ ಬಂದಿದ್ದ ಕೀಲು ಕುದುರೆ, ಬೊಂಬೆ ಕುಣಿತ, ಕರಡಿ ನೃತ್ಯ ಮತ್ತು ಮರಕಾಲು ಕುಣಿತ ಮತ್ತು ತಮಟೆ ವಾದನಗಳ ನಡುವೆ ಕಬ್ಬು, ಎಳೆನೀರು, ಫ್ರುಟ್ ಚಾಟ್, ಪಾಯಸ, ಸುಕ್ರುಂಡೆ, ಲಾಡು, ಹೋಳಿಗೆ, ಹೊಬ್ಬಟ್ಟು, ಕೊಬ್ಬರಿ ಮಿಠಾಯಿ, ಇಡ್ಲಿ, ದೋಸೆ, ಕಡುಬು, ಬಾದಾಮ್ ಕೀರು ಹೋಳಿಗೆ, ಬೊಂಬೈ ಬೋಂಡಾ, ವಡೆ, ಬಜ್ಜಿ, ಜೋಳದ ರೊಟ್ಟಿ, ಅಕ್ಕಿರೊಟ್ಟಿ, ಸಜ್ಜೆರೊಟ್ಟಿ, ರಾಗಿ ಮುದ್ದೆ, ಪುಲಿಯೋಗರೆ, ಅವರೇಕಾಳು ಬಿಸಿಬೇಳೆ ಬಾತ್, ಚಿತ್ರಾನ್ನ, ತವಾ ಪುಲಾವ್, ಬಟಾಣಿ ಪುಲಾವ್, ಮೊಸರನ್ನ, ಸಾಬುದಾನ ವಡೆ, ಮಂಡಕ್ಕಿ, ಗಾಜರ್ ಹಲ್ವ ಹೀಗೆ ಎಲ್ಲಾ ತರದ ರುಚಿರುಚಿಯಾದ ತಿಂಡಿ ತಿನಿಸುಗಳಿದ್ದವು. ಸರ್ಕಾರಿ ಅಧಿಕಾರಿಗಳು, ಸಾಮಾನ್ಯ ಜನರು ಹಾಗೂ ದೆಹಲಿಯಲ್ಲಿ ವಾಸಿಸುತ್ತಿರುವ ಹಲವಾರು ವಿದೇಶಿ ರಾಯಭಾರಿಗಳ ಪ್ರತಿನಿಧಿಗಳು ಸಹ ಈ ಕಾರ್ಯಕ್ರಮದ ಆನಂದ ಪಡೆದರು. ಅ

***ಸಖಾರಾಮ ಉಪ್ಪೂರು***

*ಆಹಾರ ಮೇಳದಲ್ಲಿ ಭಾಗವಹಿಸಿದ ಮಳಿಗೆಗಳಿಗೆ ಬಹುಮಾನಗಳನ್ನು ಜನವರಿ 29ರಂದು ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿತರಣೆ ಮಾಡಲಾಯಿತು. ಸಸ್ಯಾಹಾರ ವಿಭಾಗದಲ್ಲಿ ಪ್ರಥಮ :* **ಶ್ರೀಮತಿ ರೂಪಶ್ರೀ** *(ಬೆಂಗಳೂರು); ದ್ವಿತೀಯ :* **ಶ್ರೀಮತಿ ಲಕ್ಷ್ಮೀ ಕಿಣಿ** *(ದಕ್ಷಿಣ ಕನ್ನಡ–ಕೊಂಕಣಿ); ತೃತೀಯ :* **ಶ್ರೀಮತಿ ಜಮುನಾ ಸಿ. ಮಠದ** *(ಹುಬ್ಬಳ್ಳಿ). ಮಾಂಸಾಹಾರ ವಿಭಾಗದಲ್ಲಿ ಪ್ರಥಮ :* **ಶ್ರೀಮತಿ ಶೋಭಾ ನಾಗರಾಜ** *(ಕೋಲಾರ); ದ್ವಿತೀಯ :* **ಶ್ರೀ ಪ್ರದೀಪ್ ಕುಮಾರ್** *(ಮಂಗಳೂರು); ತೃತೀಯ :* **ಶ್ರೀಮತಿ ಆಶಾಲತ ಎಂ.** *(ಬೆಂಗಳೂರು) ಮತ್ತು* **ಶ್ರೀ ಯು.ಜಿ. ಸುಧೀರ್ ಕುಮಾರ್** *(ಕುಂದಾಪುರ). ಇದರ ಜೊತೆಗೆ ಭಾಗವಹಿಸಿದ ಎಲ್ಲಾ ಮಳಿಗೆಗಳ ಸದಸ್ಯರಿಗೂ ಕೂಡಾ ಪ್ರೋತ್ಸಾಹಕ ಬಹುಮಾನ ನೀಡಿ ಅಭಿನಂದಿಸಲಾಯಿತು.*





# ಕನ್ನಡ ಭಾಷಾ ಪೀಠದ ಮಹತ್ವದ ಕೆಲಸ
# ಸ್ವಾತಂತ್ರ್ಯೋತ್ತರ ಭಾರತೀಯ ಸಾಹಿತ್ಯದಲ್ಲಿ ಆಧುನಿಕತೆಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ




ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು ಮತ್ತು ದೆಹಲಿಯ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಕನ್ನಡ ಭಾಷಾ ಪೀಠವು ಜಂಟಿಯಾಗಿ ಜನವರಿ 19, 20, 21, 2017 ರಂದು ಜೆ ಎನ್ ಯುವಿನ ಭಾರತೀಯ ಭಾಷೆಗಳ ಕೇಂದ್ರದಲ್ಲಿ 'ಸ್ವಾತಂತ್ರ್ಯೋತ್ತರ ಭಾರತೀಯ ಸಾಹಿತ್ಯದಲ್ಲಿ ಆಧುನಿಕತೆ' ಎಂಬ ವಿಷಯದ ಕುರಿತು ಮೂರು ದಿನಗಳ ಮಹತ್ವದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿತ್ತು. ಭಾರತದ 11 ಮುಖ್ಯ ಭಾಷೆಗಳ 20 ವಿದ್ವಾಂಸರು ಭಾಗವಹಿಸಿದ್ದ ಈ ವಿಚಾರ ಸಂಕಿರಣವು ಸ್ವಾತಂತ್ರ್ಯೋತ್ತರ ಭಾರತದ ಆಧುನಿಕತೆಯ ಪರಿಕಲ್ಪನೆ ಮತ್ತು ಅದಕ್ಕೆ ಭಾರತೀಯ ಲೇಖಕರು ನೀಡಿದ ಸೃಜನಾತ್ಮಕ ಪ್ರತಿಕ್ರಿಯೆಗಳ ಕುರಿತು ಅನೇಕ ಮುಖ್ಯ ಪ್ರಶ್ನೆಗಳನ್ನು ಎತ್ತಿತು.

ಆಧುನಿಕತೆಯ ಒಂದು ಪರಿಕಲ್ಪನೆ ಮತ್ತು ನಿರಂತರ ಪ್ರಕ್ರಿಯೆಯಾಗಿ ಜಗತ್ತಿನಾದ್ಯಂತ ಸದಾ ಕಾಣಿಸಿಕೊಳ್ಳುತ್ತಲೇ ಬಂದಿದೆ. ಪಂಪ ಬರೆದಾಗ, ವಚನಕಾರರು ಸಾಮಾಜಿಕ ಕ್ರಾಂತಿಯ ಪ್ರಶ್ನೆಗಳನ್ನೆತ್ತಿದ್ದಾಗ, ಕುವೆಂಪು ಅವರು 20ನೇ ಶತಮಾನಕ್ಕೆ ಬೇಕಾದ ವೈಚಾರಿಕತೆಯನ್ನು ಪ್ರತೀತಗೊಳಿಸಿದಾಗ, ಅವರೆಲ್ಲರೂ ಅವರವರ ಕಾಲದ ಆಧುನಿಕತೆಗೆ ಮುಖಾಮುಖಿಯಾಗಿದ್ದರು. ವಿಚಾರ ಸಂಕಿರಣದಲ್ಲಿ ಇಂಥ ಪ್ರಶ್ನೆಗಳ ಜೊತೆಗೆ, ಮುಖ್ಯವಾಗಿ ಭಾರತಕ್ಕೆ ವಸಾಹತು ಕಾಲಘಟ್ಟದಲ್ಲಿ ಆಧುನಿಕತೆಯು ಪ್ರವೇಶಿಸಿದ ಆನಂತರ ಅದು ಭಾರತೀಯ ಜನಜೀವನದ ಆಳಕ್ಕೆ ಸೂಕ್ಷ್ಮವಾಗಿ ಇಳಿದ ಬಗೆಯ ಕುರಿತು ಕೂಡಾ ಗಂಭೀರವಾದ ವಿಶ್ಲೇಷಣೆ ನಡೆಸಲಾಯಿತು. ಭಾರತದ ಬೇರೆ ಭಾಷೆಗಳಲ್ಲಿ ಅದು ನಡೆದ ಕುರಿತು ಕುತೂಹಲಕರವೂ ವೈಧ್ಯಮಯವೂ ಆದ ಮಾಹಿತಿಗಳನ್ನು ವಿದ್ವಾಂಸರು ಪರಸ್ಪರ ಹಂಚಿಕೊಂಡರು.

19 ನೇಶತಮಾನದ ಕೊನೆ ಹಾಗೂ 20ನೇಶತಮಾನದಲ್ಲಿ ಭಾರತೀಯ ಸಾಹಿತ್ಯದಲ್ಲಿ ಕಾಣಿಸಿಕೊಂಡ ಆಧುನಿಕತೆಯ ಕುರಿತು ವಿದ್ವಾಂಸರು ಸಾಕಷ್ಟು ಬೆಳಕು ಚೆಲ್ಲಿದರು. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಆಧುನಿಕತೆಯ ವಿವಿಧ ಆಯಾಮಗಳ ಕುರಿತು ಬಿ ಎಂ ಶ್ರೀಕಂಠಯ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ, ಕುವೆಂಪು, ಗೋಪಾಲಕೃಷ್ಣ ಅಡಿಗ, ಯು ಅರ್ ಅನಂತಮೂರ್ತಿ, ಎ ಕೆ ರಾಮಾನುಜನ್ ಮೊದಲಾದ ವಿದ್ವಾಂಸರು ತಮ್ಮ ಲೇಖನಗಳ ಮೂಲಕ (ಉದಾ: ಅಡಿಗರ ಮಣ್ಣಿನ ವಾಸನೆ, ಅನಂತಮೂರ್ತಿ ಅವರ ಪ್ರಜ್ಞೆ ಮತ್ತು ಪರಿಸರ ಇತ್ಯಾದಿ) ಹಾಗೂ ಸೃಜನಶೀಲ ರಚನೆಗಳ ಮೂಲಕ ಆಧುನಿಕತೆಗೆ ಪ್ರತಿಕ್ರಿಯಿಸಿದ್ದಾರೆ. ಇವರಲ್ಲಿ ಹಲವರು ಆಧುನಿಕತೆಗೆ ಬೆನ್ನು ಹಾಕಲು ಬಯಸಿದ್ದರೆ, ಕೆಲವರು ಆಧುನಿಕತೆ ಮತ್ತು ಪರಂಪರೆಯ ಬೆಸುಗೆಯಲ್ಲಿ ಹೊಸತನವನ್ನು ಕಂಡುಕೊಂಡರು. ಮತ್ತೆ ಕೆಲವರು ಆಧುನಿಕತೆಯನ್ನೇ ಸ್ವೀಕರಿಸಿ ಪರಂಪರೆಯನ್ನು ತ್ಯಜಿಸುವ ಮಾತನ್ನಾಡಿದರು. ಈ ನಡುವೆ ಆಧುನಿಕತೆಯನ್ನು ತಿರಸ್ಕರಿಸುತ್ತೇವೆ ಎಂದವರು, ಜಾನಪದ ಮಾಹಿಗಳ ಮೊರೆಹೊಕ್ಕು, ಬರೆಯುತ್ತಾ ಹೋದಂತೆ ಸ್ವತಹ ಆಧುನಿಕ ಲೇಖಕರೆಂದು ಗುರುತಿಸಿಕೊಂಡ ಪ್ರಕ್ರಿಯೆಯೂ ನಡೆಯಿತು. ಈ ಮಾತುಗಳು ಒಟ್ಟು ಭಾರತೀಯ ಸಾಹಿತ್ಯಕ್ಕೆ ಹಾಗೆಯೇ ಅನ್ವಯವಾಗುವುದಿಲ್ಲ, ಏಕೆಂದರೆ ಬೇರೆ ಬೇರೆ ಭಾಷೆಗಳಲ್ಲಿ ಅದು ಬೇರೆ ಬೇರೆ ಕಾಲ ಘಟ್ಟದಲ್ಲಿ ಹಾಗೂ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಂಡಿತು. ಕೆಲವು ಭಾಷೆಗಳಲ್ಲಿ ಅದು ಸಣ್ಣಕತೆಗಳ ರೂಪದಲ್ಲಿ ಕಾಣಿಸಿಕೊಂಡರೆ, ಕೆಲವುದರಲ್ಲಿ ಅದು ಕಾದಂಬರಿ ಪ್ರಕಾರದಲ್ಲಿ ಕಾಣಿಸಿಕೊಂಡಿತು. ಈ ನಿಟ್ಟಿನಲ್ಲಿ ಆಧುನಿಕತೆಯು ಪ್ರವೇಶದಿಂದ ಭಾರತೀಯ ಸಾಹಿತ್ಯ ಪರಂಪರೆ ಪಡೆದದ್ದೆಷ್ಟು? ಕಳೆದುಕೊಂಡದ್ದೆಷ್ಟು ? ಎಂಬ ಕುರಿತು ಸಂಕಿರಣದಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು. ಸ್ವಾತಂತ್ರ್ಯೋತ್ತರ ಬಾಂಗ್ಲಾ ಸಾಹಿತ್ಯದಲ್ಲಿ ರವೀಂದ್ರನಾಥ ಠಾಗೋರರನ್ನು ಮರು ವಿಮರ್ಶೆಗೆ ಒಳಪಡಿಸುವವ ಕೆಲಸ ನಡೆದದ್ದು, ತಮಿಳಿನಲ್ಲಿ ಸಣ್ಣ ಕತೆಗಳೇ ಆಧುನಿಕತೆಗೆ ಹೆಚ್ಚು ತೆರೆದುಕೊಂಡದ್ದು, ಮಲೆಯಾಳ ಸಾಹಿತ್ಯ ಅಲ್ಲಿನ ಜಾನಪದದಿಂದ ಪಡೆದ ಪ್ರೇರಣೆಗಳು, ಭಾರತೀಯ ಪಂಜಾಬಿ ಭಾಷೆಯಲ್ಲಿ ಕಾಣಿಸಿಕೊಂಡ ಆಧುನಿಕತೆಯು, ಪಾಕಿಸ್ತಾನದ ಪಂಜಾಬಿ ಭಾಷೆಯಲ್ಲಿ ಕಾಣಿಸದೇ ಇದ್ದದ್ದು, ಮರಾಠೀ ಸಾಹಿತ್ಯವು ವಸಾಹತು ಪ್ರಭಾವದಿಂದ ಬಿಡುಗಡೆಗೊಳ್ಳಲು ನಡೆಸಿದ ಹುಡುಕಾಟಗಳು, ಸ್ವಾತಂತ್ರ್ಯೋತ್ತರ ಭಾರತದ ಆತ್ಮ ಚರಿತ್ರೆಗಳು ಆಧುನಿಕತೆಯನ್ನು 'ಕೆಳಗಿನಿಂದ ನೋಡುವ' ಕ್ರಮವನ್ನು ಬೆಳೆಸಿಕೊಂಡ ಬಗೆಗೆಗಳ ಕುರಿತು ವಿದ್ವಾಂಸರು ಒಳನೋಟಗಳುಳ್ಳ ಪ್ರಬಂಧಗಳನ್ನು ಮಂಡಿಸಿದರು. ಜೊತೆಗೆ ' ಒಡಿಯಾದ ಲೇಖಕ ಗೋಪಿನಾಥ ಮೊಹಂತಿಯವರನ್ನು ಠಾಗೋರರೊಡನೆ ಹೋಲಿಸುವುದೇ ತಪ್ಪು, ಹೋಲಿಸುವುದಾದರೆ ಶೇಕ್ಸ ಪಿಯರ್ ಜೊತೆ ಮಾತ್ರ ಹೋಲಿಸಬೇಕು', ಠಾಗೋರರನ್ನು ವಿಮರ್ಶೆ ಮಾಡಬೇಕಾದರೆ ನಿಮಗೆಷ್ಟು ಧೈರ್ಯ?' ಎಂಬಂಥ ಮಾತುಗಳನ್ನೂ ಪ್ರಬಂಧ ಮಂಡಕರು ಪ್ರೇಕ್ಷಕರಿಂದ ಕೇಳಿಸಿಕೊಳ್ಳಬೇಕಾಯಿತು.

ಈ ಚರ್ಚೆಗಳಲ್ಲಿ ಕನ್ನಡ, ತಮಿಳು, ಮಲೆಯಾಳಂ, ತೆಲುಗು, ಒಡಿಯಾ, ಮರಾಟಿ, ಬಾಂಗ್ಲಾ, ಹಿಂದಿ, ಉರ್ದು, ಅಸ್ಸಾಮೀ ಮತ್ತು ಪಂಜಾಬಿ ಭಾಷೆಗಳ ವಿದ್ವಾಂಸರು ಪ್ರಬಂಧ ಮಂಡಿಸುವುದರ ಜೊತೆಗೆ, ಆಯಾ ಭಾಷೆಗಳ ವಿದ್ಯಾರ್ಥಿಗಳೂ, ಸಂಶೋಧಕರೂ ಭಾಗವಹಿಸಿದ್ದರು.

***ಉದ್ಘಾಟನಾ ಕಾರ್ಯಕ್ರಮ:***
ಸಂಕಿರಣದ ಉದ್ಘಾಟನೆಯು ಜನವರಿ 19ರಂದು ನಡೆಯಿತು. ಸಂಕಿರಣದ ಉದ್ಘಾಟನಾ ಭಾಷಣ ಮಾಡಿದ ಜೆ. ಎನ್. ಯು. ವಿನ ಕುಲಪತಿ ಪ್ರೊ. ಜಗದೀಶ್ ಕುಮಾರ್ ಅವರು ' ಭಾರತವನ್ನು ಅರಿತುಕೊಳ್ಳುವುದಕ್ಕೆ ಈ ಬಗೆಯ ಬಹುಭಾಷಾ ಗೋಷ್ಠಿಗಳು ಸಹಕರಿಸುತ್ತದೆ' ಎಂದು ಹೇಳಿ, ಜೆ.ಎನ್.ಯು. ವಿನಲ್ಲಿ ಇನ್ನಷ್ಟು ಭಾರತೀಯ ಭಾಷೆಗಳು ಪೀಠಗಳು ಬರಲಿದ್ದು, ಕನ್ನಡ ಭಾಷಾ ಪೀಠವು ಅವುಗಳಿಗೆ ಮಾರ್ಗದರ್ಶನ ಮಾಡಬೇಕು ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಭಾಷಾ ಸಂಸ್ಥಾನದ ಡೀನ್ ಪ್ರೊ. ರೇಖಾ ರಾಜನ್ ಅವರು ಮಾತಾಡಿ ಕನ್ನಡ ಅಧ್ಯಯನ ಪೀಠದ



ಜೊತೆ ಸೇರಿ ಇದೇ ವಿಷಯದ ಮೇಲೆ ಅಂತಾರಾಷ್ಟ್ರೀಯ ವಿಚಾರ ಸಂಕಿರಣವೊಂದನ್ನು ಹಮ್ಮಿಕೊಳ್ಳುವ ಇಂಗಿತವನ್ನು ವ್ಯಕ್ತಪಡಿಸಿದರು. ಸಭಾಧ್ಯಕ್ಷತೆ ವಹಿಸಿದ್ದ ಜ್ಞಾನಪೀಠ ಪುರಸ್ಕೃತ ಲೇಖಕ ಡಾ. ಚಂದ್ರಶೇಖರ ಕಂಬಾರ ಅವರು ಮಾತಾಡಿ 'ಆಧುನಿಕತೆಯ ಕುರಿತಾದ ಇಂತಹ ವಿಚಾರ ಸಂಕಿರಣಗಳು ಇಂದಿನ ಅಗತ್ಯಗಳಾಗಿವೆ ಎಂದು ಹೇಳಿದರಲ್ಲದೆ ಒಬ್ಬ ಸೃಜನಶೀಲ ಲೇಖಕನಾಗಿ ತಾನು ಆಧುನಿಕತೆಗೆ ಮುಖಾ ಮುಖಿಯಾದ ಬಗೆಯ ಕುರಿತು ವಿವರಿಸಿದರು. ಖ್ಯಾತ ಕವಿಗಳಾದ ಪ್ರೊ ಎಚ್ ಎಸ್ ಶಿವಪ್ರಕಾಶ್ ಅವರು ಸಂಕಿರಣದ ಆಶಯ ಭಾಷಣ ಮಾಡುತ್ತಾ' ಆಧುನಿಕತೆಯ ಭಾರತದ ವಿವಿಧ ಭಾಷೆಗಳಲ್ಲಿ ಭಿನ್ನ ಭಿನ್ನವಾಗಿ ರೂಪುಗೊಂಡ ಬಗೆಯನ್ನು ಸಾವಧಾನವಾಗಿ ವಿವರಿಸಿದರು. ಕನ್ನಡ ಭಾಷಾ ಪೀಠದ ಪ್ರಾಧ್ಯಾಪಕ ಡಾ. ಪುರುಷೋತ್ತಮ ಬಿಳಿಮಲೆ ಅವರು ಎಲ್ಲರನ್ನೂ ಸ್ವಾಗತಿಸಿದರು. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸದಸ್ಯರೂ ಸಂಕಿರಣದ ಸಂಚಾಲಕರಲ್ಲಿ ಒಬ್ಬರೂ ಆಗಿರುವ ಶ್ರೀ ಸಿರಾಜ್ ಅಹಮದ್ ಅವರು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸಾಧನೆಗಳನ್ನು ವಿವರಿಸಿ ವಂದನಾರ್ಪಣೆ ಮಾಡಿದರು. ಜೆ ಎನ್ ಯು ಇತಿಹಾಸ ವಿಭಾಗದ ಸಂಶೋಧನಾ ವಿದ್ಯಾರ್ಥಿನಿ ದಿವ್ಯ ಕೋಮಲಾ ಅವರು ಕಾರ್ಯಕ್ರಮ ನಿರ್ವಹಣೆ ಮಾಡಿದರು. ಶ್ರೀಮತಿ ಪೂಜಾ ಪ್ರದೀಪ್ ಅವರು ಗೋಪಾಲಕೃಷ್ಣ ಅಡಿಗರ ಯಾವ ಮೋಹನ ಮುರಳಿ ಕರೆಯಿತು ಕವನವನ್ನು ಸುಶ್ರಾವ್ಯವಾಗಿ ಹಾಡಿದರು.

***ಪ್ರಬಂಧ ಮಂಡನೆಗಳು:***

ಮೂರು ದಿನಗಳ ಕಾಲ ನಡೆದ ಈ ವಿಚಾರ ಸಂಕಿರಣದಲ್ಲಿ ಕನ್ನಡ ಭಾಷೆಯ ಕುರಿತು ಕುವೆಂಪು ವಿಶ್ವವಿದ್ಯಾಲಯದ ಪ್ರೊ. ರಾಜೇಂದ್ರ ಚೆನ್ನಿ ಹಾಗೂ ಮೈಸೂರು ವಿಶ್ವವಿದ್ಯಾಲಯದ ಪ್ರೊ. ಪೃಥ್ವಿ ದತ್ತ ಚಂದ್ರ ಶೋಭಿ ಅವರು, ಮಲೆಯಾಳಂ ಸಾಹಿತ್ಯದ ಕುರಿತು ಜೆ ಎನ್ ಯು ವಿನ ಪ್ರೊ. ಉದಯ ಕುಮಾರ್ ಹಾಗೂ ದೆಹಲಿ ವಿವಿಯ ಪ್ರೊ. ಉಣ್ಣಿ ಕೃಷ್ಣನ್ ಅವರು, ತಮಿಳು ಸಾಹಿತ್ಯದ ಕುರಿತು ಜೆ ಎನ್ ಯು ವಿನ ಪ್ರೊ. ಚಂದ್ರಶೇಗರನ್ ಹಾಗೂ ಬನಾರಾಸ್ ಹಿಂದೂ ವಿಶ್ವವಿದ್ಯಾಲಯದ ಡಾ. ಜಗದೀಸನ್ ಅವರೂ, ತೆಲುಗು ಸಾಹಿತ್ಯದ ಕುರಿತು ದೆಹಲಿಯ ವೆಂಕಟೇಶ್ವರ ಕಾಲೇಜಿನ ಪ್ರೊ. ಮುರಳೀಧರ ರಾವ್ ಅವರು ಹಾಗೂ ಬನಾರಾಸ್ ಹಿಂದೂ ವಿಶ್ವವಿದ್ಯಾಲಯದ ಪ್ರೊ. ಬುಡಾಟಿ ವೆಂಕಟೇಶ್ವರುಲು ಅವರೂ, ಹಿಂದಿ ಸಾಹಿತ್ಯದ ಕುರಿತು ಜೆ ಎನ್ ಯು ವಿನ ಪ್ರೊ. ರಮಣ ಸಿಂಗ್ ಹಾಗೂ ಜಾಮಿಯಾ ಮಿಲಿಯಾ ಇಸ್ಲಮಿಯಾದ ಡಾ. ಗಣಪತ್ ತೇಲಿ ಅವರೂ, ಉರ್ದು ಸಾಹಿತ್ಯದ ಕುರಿತು ಕಾಶ್ಮೀರ ವಿಶ್ವವಿದ್ಯಾಲಯದ ಪ್ರೊ. ಪ್ರೊ. ಮೊಹಮ್ಮದ್ ಜಮಾನ್ ಅಜುರ್ದಾ ಅವರೂ, ಮರಾಠೀ ಸಾಹಿತ್ಯದ ಕುರಿತು ಅಹಮದ ನಗರದ ಪ್ರೊ. ಕಮಲಾಕರ ಭಟ್ ಅವರೂ, ಪಂಜಾಬೀ ಸಾಹಿತ್ಯದ ಕುರಿತು ದೆಹಲಿಯ ದಯಾಳ್ ಸಿಂಗ್ ಕಾಲೇಜಿನ ಪ್ರೊ. ರವೀಂದ್ರ ಸಿಂಗ್ ಹಾಗೂ ಪಂಜಾಬೀ ವಿಶ್ವವಿದ್ಯಾಲಯದ ಪ್ರೊ. ಗುರುಪಾಲ್ ಸಂಧು ಅವರೂ, ಒಡಿಯಾ ಸಾಹಿತ್ಯದ ಕುರಿತು ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯದ ಪ್ರೊ. ನಂದಿನಿ ಸಾಹೂ ಅವರೂ, ಅಸ್ಸಾಮೀ ಸಾಹಿತ್ಯದ ಕುರಿತು ಡಾ. ಸರತ್ ಜೇನಾ ಅವರೂ, ಬಾಂಗ್ಲಾ ಸಾಹಿತ್ಯದ ಕುರಿತು ಡಾ. ಸುರಂಜನ್ ರೇ ಹಾಗೂ ಪ್ರೊ. ಪರಿಮಿತ ಚಕ್ರವರ್ತಿ ಅವರೂ ಪ್ರಬಂಧಗಳನ್ನು ಮಂಡಿಸಿದರು. ಶ್ರೀಗಳಾದ ಅಲಿ ಅಹ್ಸಾನ್, ಕೀರ್ತಿ ಭಜಂತ್ರಿ, ಕೆ.ತಿಲಕವತಿ, ಅಜಯ ಕುಮಾರ್, ಮತ್ತು ದೇಬ್‌ಮಲ್ಯ ಬಿಸ್ವಾಸ್ ಅವರು ವಿವಿಧ ಗೋಷ್ಠಿಗಳನ್ನು ನಿರ್ವಹಿಸಿ ಪ್ರಬಂಧ ಮಂಡಕರನ್ನು ಸಭೆಗೆ ಪರಿಚಯಿಸಿದರು.

***ಸಮಾರೋಪ:***

ಜನವರಿ 21ರಂದು ನಡೆದ ಸಂಕಿರಣದ ಸಮಾರೋಪ ಕಾರ್ಯಕ್ರಮದಲ್ಲಿ ಖ್ಯಾತ ಲೇಖಕ ಶ್ರೀ ಅಶೋಕ್ ವಾಜಪೇಯಿ ಅವರು ಭಾಗವಹಿಸಿ ಸಮಾರೋಪ ಭಾಷಣ ಮಾಡಿದರು. ಜೆ ಎನ್ ಯು ವಿನ ಭಾರತೀಯ ಭಾಷೆಗಳ ಕೇಂದ್ರದ ಅಧ್ಯಕ್ಷ ಪ್ರೊ. ಅನ್ವರ್ ಪಾಶಾ ಅವರು ಕನ್ನಡ ಭಾಷಾ ಪೀಠದ ಕೆಲಸಗಳು ಇತರ ಪೀಠಗಳಿಗೆ ಮಾದರಿಯಾಗುವಂತೆ ಕೆಲಸ ಮಾಡುತ್ತಿದೆ ಎಂದು ಶ್ಲಾಘಿಸಿದರು. ಪ್ರಾಧ್ಯಾಪಕ ಡಾ. ಪುರುಷೋತ್ತಮ ಬಿಳಿಮಲೆ ಅವರು ಭಾಗವಹಿಸಿದ ಎಲ್ಲರಿಗೂ ಕೃತಜ್ಞತೆ ಸೂಚಿಸಿದ್ದಲ್ಲದೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಎಲ್ಲಾ ಸದಸ್ಯರನ್ನೂ ಹಾಗೂ ಅದರ ಅಧ್ಯಕ್ಷರಾದ ಪ್ರೊ. ಕ ವಿ ನಾರಾಯಣ ಅವರನ್ನು ವಿಶೇಷವಾಗಿ ಸ್ಮರಿಸಿಕೊಂಡರು. ಈ ಸಂದರ್ಭದಲ್ಲಿ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಕನ್ನಡದಲ್ಲಿ ಪ್ರಕಟಿಸುವುದಾಗಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸದಸ್ಯರಾದ ಶ್ರೀ ಸಿರಾಜ್ ಅಹಮದ್ ಅವರು ಹೇಳಿದರು.

ಸಂಕಿರಣವು ಭಾರತೀಯ ಭಾಷೆಗಳಲ್ಲಿ ಗಂಭೀರವಾಗಿ ಕೆಲಸ ಮಾಡುತ್ತಿರುವ ಅನೇಕ ವಿದ್ವಾಂಸರನ್ನು ಒಂದು ವೇದಿಕೆಗೆ ತರುವಲ್ಲಿ ಯಶಸ್ವಿಯಾಯಿತು ಮತ್ತು ಕನ್ನಡ ಭಾಷಾ ಪೀಠವು ಜೆ ಎನ್ ಯು ವಿನಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ಸಾಬೀತು ಪಡಿಸಿತು. ಅ

***ಅಭಿಮತ ವರದಿ***


**ದೆಹಲಿ ಕರ್ನಾಟಕ ಸಂಘ**

ರಾವ್ ತುಲಾರಾಮ್ ಮಾರ್ಗ, ಸೆಕ್ಟರ್–12, ಆರ್.ಕೆ. ಪುರಂ, ನವದೆಹಲಿ–110022



ಆತ್ಮೀಯರೇ,

**ದೇಣಿಗೆ ನೀಡಿ ಸಹಕರಿಸಿ**

ಮೈಸೂರಿನ ರಂಗಾಯಣದಲ್ಲಿ ರಂಗ ಕಲಾವಿದರಾಗಿ, ನಿರ್ದೇಶಕರಾಗಿ ಸೇವೆಸಲ್ಲಿಸುತ್ತಿದ್ದ ಶ್ರೀ ಮಂಜುನಾಥ ಬೆಳಕೆರೆಯವರು ಇತ್ತೀಚೆಗೆ ಹಠಾತ್ತಾಗಿ ನಿಧನಗೊಂಡಿದ್ದು ತಮಗೆಲ್ಲ ತಿಳಿದಿದೆಯಷ್ಟೇ. ತಮ್ಮ ಜೀವನವನ್ನು ರಂಗಭೂಮಿಗೆ ಮುಡಿಪಾಗಿಟ್ಟಿದ್ದ ಶ್ರೀ ಬೆಳಕೆರೆಯವರು ದೆಹಲಿ ಕನ್ನಡಿಗರಿಗೆ ಹತ್ತಿರವಾಗಿದ್ದು ಸಂಘದ ಕಲಾವಿದರಿಗೆ 'ಸೇವಂತಿ ಪ್ರಸಂಗ' ನಾಟಕವನ್ನು ನಿರ್ದೇಶಿಸಿ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಯಶಸ್ವಿ ಪ್ರದರ್ಶನದ ನಂತರ. ಇದೇ ನಾಟಕ ಮೈಸೂರು ಮತ್ತು ಬೆಂಗಳೂರಿನಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಳ್ಳಲು ಅವರ ಕೊಡುಗೆ ಅಮೂಲ್ಯ. ಆ ಮೂಲಕ ಬೆಳಕೆರೆಯವರು ದೆಹಲಿ ಕನ್ನಡಿಗರ ಮತ್ತು ಸೇವಂತಿ ಪ್ರಸಂಗ ನಾಟಕದಲ್ಲಿ ಅಭಿನಯಿಸಿದ ಎಲ್ಲ ಕಲಾವಿದರ ಮನದಾಳದಲ್ಲಿ ಉಳಿದರು. ಅವರ ಅಗಲುವಿಕೆಯ ಈ ಸಂದರ್ಭದಲ್ಲಿ ಆರ್ಥಿಕವಾಗಿ ಬಹಳ ಸಂಕಷ್ಟವನ್ನು ಎದುರಿಸುತ್ತಿರುವ ಅವರ ಕುಟುಂಬಕ್ಕೆ ಸ್ಪಂದಿಸಬೇಕಾದ್ದು ನಮ್ಮ ಕರ್ತವ್ಯ. ಆದ್ದರಿಂದ ಕಾರ್ಯಕಾರಿ ಸಮಿತಿ ದೇಣಿಗೆ ಮುಖಾಂತರ ಹಣ ಸಂಗ್ರಹಿಸಿ ಅವರ ಕುಟುಂಬಕ್ಕೆ ನೆರವು ನೀಡುವ ನಿರ್ಣಯವನ್ನು ತೆಗೆದುಕೊಂಡಿದೆ. ತಾವುಗಳೆಲ್ಲ ದೇಣಿಗೆ ನೀಡಿ ಸಹಕರಿಸಬೇಕೆಂದು ವಿನಂತಿ. ದೇಣಿಗೆ ನೀಡಿದವರ ಹೆಸರುಗಳನ್ನು ಅಭಿಮತದಲ್ಲಿ ಪ್ರಕಟಿಸಲಾಗುವುದು.

(ದೇಣಿಗೆಯನ್ನು ಚೆಕ್ ಮುಖಾಂತರ **DELHI KARNATAKA SANGHA** ದ ಹೆಸರಿನಲ್ಲಿ ನೀಡಬಹುದು ಮತ್ತು ಸಂಘದ ಖಾತೆಗೆ ಜಮಾ ಮಾಡಬಹುದು
**Account Name : Delhi Karnataka Sangha, Account No. : C/A: 550 200 0100 000 101, Name of the Bank : Karnataka Bank Ltd., Branch : R.K.Puram, New Delhi, IFSC Code : KARB0000550, MICR Code : 110052014)**



# ಪಾಪೆಮಜಲು ಸರಕಾರಿ ಪ್ರೌಢ ಶಾಲೆಗೆ ಇಂಗ್ಲೀಷ್ ಪಾತ್ರಾಭಿನಯದಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿ



ಗ್ರಾಮೀಣ ಪ್ರದೇಶದ ಸರಕಾರಿ ಶಾಲೆಯ ಮಕ್ಕಳು ರಾಷ್ಟ್ರಮಟ್ಟದ ಇಂಗ್ಲಿಷ್ ಪಾತ್ರಾಭಿನಯ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದು ವಿಶಿಷ್ಟ ಸಾಧನೆ ಮಾಡಿದ್ದಾರೆ. ಎನ್.ಸಿ.ಇ.ಆರ್.ಟಿ.ಇ. ದೆಹಲಿಯಲ್ಲಿ ಡಿಸೆಂಬರ್ 5 ರಿಂದ 8ರ ವರೆಗೆ ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಯೋಜನೆಯಡಿಯಲ್ಲಿ ನಡೆದ ರಾಷ್ಟ್ರಮಟ್ಟದ ಇಂಗ್ಲಿಷ್ ಪಾತ್ರಾಭಿನಯ ಹಾಗೂ ಜನಪದ ನೃತ್ಯ ಸ್ಪರ್ಧೆಯಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿರುವ ಸರಕಾರಿ ಪ್ರೌಢ ಶಾಲೆ ಪಾಪೆಮಜಲು ಪುತ್ತೂರು ತಾಲೂಕು ಇಲ್ಲಿನ 5 ವಿದ್ಯಾರ್ಥಿಗಳ ತಂಡ ಎಚ್.ಐ.ವಿ. ಸೋಂಕಿತ ಹದಿಹರೆಯದವರನ್ನು ಬದಲಾವಣೆ ಮಾಡುವುದು ಈ ವಿಷಯದ ಮೇಲೆ ಇಂಗ್ಲಿಷ್ ಭಾಷೆಯಲ್ಲಿ ಪಾತ್ರಾಭಿನಯ ಪ್ರದರ್ಶಿಸಿ ದ್ವಿತೀಯ ಸ್ಥಾನಗಳಿಸಿರುತ್ತಾರೆ. ವಿವಿಧ ರಾಜ್ಯಗಳಿಂದ ಸುಮಾರು 32 ತಂಡಗಳು ಭಾಗವಹಿಸಿದ ಈ ಸ್ಪರ್ಧೆಯಲ್ಲಿ ದಕ್ಷಿಣ ಭಾರತ ವಲಯದಿಂದ ಪ್ರಥಮ ಸ್ಥಾನದೊಂದಿಗೆ ಅಂತಿಮ ಸುತ್ತಿಗೆ ಆಯ್ಕೆಯಾದ ಈ ಪಾತ್ರಾಭಿನಯದ ಪರಿಕಲ್ಪನೆ, ರಚನೆ ಹಾಗೂ ನಿರ್ದೇಶನ ರಾಜ್ಯ ಸಂಪನ್ಮೂಲ ವ್ಯಕ್ತಿಗಳೂ ಹಾಗೂ ಗಣಿತ ಶಿಕ್ಷಕರಾದ ಶ್ರೀ ಪ್ರಕಾಶ ಮೂಡಿತ್ತಾಯ ಇವರದ್ದಾಗಿದ್ದು ಇಂಗ್ಲಿಷ್ ಶಿಕ್ಷಕರಾದ ಶ್ರೀಮತಿ ಶಾಲೆಟ್ ಜೇನ್ ರೆಬೆಲ್ಲೋ ಮಾರ್ಗದರ್ಶನ ನೀಡಿರುತ್ತಾರೆ.

### *ದೆಹಲಿ ಕರ್ನಾಟಕ ಸಂಘದಿಂದ ವಿಶೇಷ ಸನ್ಮಾನ*

ಈ ರಾಷ್ಟ್ರ ಪ್ರಶಸ್ತಿ ವಿಜೇತ ತಂಡವನ್ನು ಡಿಸೆಂಬರ್ 9, 2016ರಂದು ದೆಹಲಿ ಕರ್ನಾಟಕ ಸಂಘದ ವತಿಯಿಂದ ಅಭಿನಂದಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಬೆಳ್ಳಾರೆಯವರು 'ಸೂಕ್ತ ಮಾರ್ಗದರ್ಶನ ಹಾಗೂ ಪ್ರೋತ್ಸಾಹ ದೊರೆತಲ್ಲಿ ಕನ್ನಡ ನಾಡಿನ ಗ್ರಾಮೀಣ ಪ್ರತಿಭೆಗಳು ಏನನ್ನೂ ಸಾಧಿಸಬಲ್ಲರು ಎಂಬುದಕ್ಕೆ ಈ ಪ್ರಶಸ್ತಿಯೇ ಸಾಕ್ಷಿ' ಎಂದು ವಿಜೇತರನ್ನು ಪ್ರಶಂಸಿಸಿದರು. ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ನಾಡೋಜ ಬೆಳಗಲ್ ವೀರಣ್ಣ ವಿಜೇತರನ್ನು ಸನ್ಮಾನಿಸಿ ಪಾತ್ರಾಭಿನಯಕ್ಕೆ ಬಳಸಿದ ರಂಗತಂತ್ರಗಳು ಹಾಗೂ ವಿದ್ಯಾರ್ಥಿಗಳ ಭಾವನಾತ್ಮಕ ಅಭಿನಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ಸಮಯದಲ್ಲಿ ವಿದ್ಯಾಥಿಗಳಿಂದ ಪ್ರಶಸಿ ವಿಜೇತ ಪತ್ರಾಭಿನಯದ ಪ್ರದರ್ಶನ ನಡೆಯಿತು. ಅ

***ಅಭಿಮತ ವರದಿ***

### ದೆಹಲಿ ಕರ್ನಾಟಕ ಸಂಘದ ಕಾವಲು ಸಮಿತಿ (Ombudsman)

ಮುಂದಿನ ಎರಡು ವರ್ಷಗಳ ಅವಧಿಗೆ ದೆಹಲಿ ಕರ್ನಾಟಕ ಸಂಘದ ಕಾವಲು ಸಮಿತಿಗೆ (Ombudsman) ವಾರ್ಷಿಕ ಸರ್ವ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.



ಶ್ರೀ ಪಿ.ಎಸ್. ಶೆಟ್ಟಿ




ಶ್ರೀಮತಿ ನಂದಿನಿ ಮಲ್ಯ



ಶ್ರೀ ಈಶ್ವರ ಮಡಿವಾಳ



ಗಣರಾಜ್ಯೋತ್ಸವ ಪರೇಡ್ 2017ರ ಒರಿಸ್ಸಾ ರಾಜ್ಯದ ಸ್ಥಬ್ಧಚಿತ್ರದಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ರಾಧಾಕೃಷ್ಣ ಅವರ ಪುತ್ರಿ ಕು. ಕೆ.ಆರ್. ಅನನ್ಯ ಅವರು ಪ್ರಧಾನಮಂತ್ರಿ ಅವರೊಂದಿಗೆ (ಬಲಗಡೆಯಿಂದ ಮೊದಲಿನವರು)




ಗಣರಾಜ್ಯೋತ್ಸವ ಪರೇಡ್ 2017ರ ಸಿ.ಎಸ್.ಐ.ಆರ್., ದೆಹಲಿ ಸ್ಥಬ್ಧಚಿತ್ರದಲ್ಲಿ ಸಂಘದ ಆಜೀವ ಸದಸ್ಯರಾದ ಶ್ರೀ ಯು.ಜಿ. ಸುಧೀರ್ ಕುಮಾರ್ ಅವರ ಪುತ್ರ ಮಾಸ್ಟರ್ ಶ್ರೀಜನ್ ಅವರು ವಿಜ್ಞಾನಿಗಳಿಗೆ ವಿದ್ಯಾರ್ಥಿಯಾಗಿ ಭಾಗವಹಿಸಿದ ಚಿತ್ರ



ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಷನ್ ಜನವರಿ ತಿಂಗಳ ಮಾಸಿಕ ಸಭೆಯಲ್ಲಿ ದಂತ ಆರೋಗ್ಯದ ವಿಷಯದ ಬಗ್ಗೆ ವಿಚಾರ ಸಂಕಿರಣ ಆಯೋಜಿಸಲಾಗಿತ್ತು. ಮೌಲಾನಾ ಆಜಾದ್ ದಂತ ವೈದ್ಯಕೀಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಶ್ರೀಮತಿ ಅಶ್ವಿನಿ ವೈ. ಬಳಪ್ಪನವರ್ ಈ ಬಗ್ಗೆ ಮಾಹಿತಿ ನೀಡಿದರು.

***ದೀನಾಜಾಯ್ಸ್***

# ಗಮನ ಸೆಳೆದ ಕರ್ನಾಟಕದ ಜಾನಪದ ನೃತ್ಯಗಳ ಸ್ತಬ್ಧಚಿತ್ರ

**68**ನೇ ಗಣರಾಜ್ಯೋತ್ಸವದ ಅಂಗವಾಗಿ ನವದೆಹಲಿಯ ರಾಜಪಥದಲ್ಲಿ ಪಥ ಸಂಚಲನದಲ್ಲಿ ಕರ್ನಾಟಕ ರಾಜ್ಯದ ಪರವಾಗಿ ಪಾಲ್ಗೊಂಡ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ “ಕರ್ನಾಟಕದ ಜಾನಪದ ನೃತ್ಯಗಳು” ಸ್ತಬ್ಧಚಿತ್ರ ಎಲ್ಲರ ಕಣ್ಮನ ಸೂರೆಗೊಳಿಸಿತು. ಈ ಬಾರಿ ಕರ್ನಾಟಕ ವಿವಿಧ ಜಾನಪದ ಕಲಾ ನೃತ್ಯಗಳೊಂದಿಗೆ ಸಾಗಿದ ಸ್ತಬ್ಧಚಿತ್ರ ಎಲ್ಲರ ಆಕರ್ಷಣೆಯ ಕೇಂದ್ರ ಬಿಂದುವಾಗಿತ್ತು.

ರಾಜ್ಯ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೇತೃತ್ವದಲ್ಲಿ ಸ್ಥಬ್ಧಚಿತ್ರ ರಕ್ಷಣಾ ಮಂತ್ರಾಲಯದ ಬಿಗಿ ರಕ್ಷಣಾ ವ್ಯವಸ್ಥೆಯಲ್ಲಿ ನಿರ್ಮಾಣಗೊಂಡಿತ್ತು.

ರಾಜ್ಯದ ಸ್ತಬ್ಧಚಿತ್ರದ ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್.ಆರ್. ವಿಶುಕುಮಾರ್ ಅವರು ಮಾಹಿತಿ ನೀಡಿ ರಕ್ಷಣಾ ಇಲಾಖೆಯ ಆಯ್ಕೆ ಸಮಿತಿಯು ಕರ್ನಾಟಕದ ಜಾನಪದ ನೃತ್ಯಗಳು ಪ್ರಕಾರಗಳ ವಿಷಯವನ್ನು ಆಯ್ಕೆ ಮಾಡಿತು. ಈ ಸ್ತಬ್ಧ ಚಿತ್ರದಲ್ಲಿ ಗೊರವರ ಕುಣಿತ, ಡೊಳ್ಳು ಕುಣಿತ, ಸೋಮನ ಕುಣಿತ, ವೀರಗಾಸೆ, ಕಂಸಾಳೆ, ಪೂಜಾ ಕುಣಿತ, ಪಟದ ಕುಣಿತ, ಜಗ್ಗಲಗೆ, ದಾಸರ ಪದ, ನಂದಿ ಧ್ವಜ ಇತರೆ ಜಾನಪದ ಕಲಾ ಪ್ರಕಾರಗಳು ಕಂಡುಬರುತ್ತವೆ. ಅಂತರರಾಷ್ಟ್ರೀಯ ಖ್ಯಾತಿಯ ಕಲಾ ನಿರ್ದೇಶಕ ಶಶಿಧರ ಅಡಪ ಹಾಗು ಅವರ ತಂಡದವರು ಸ್ತಬ್ಧಚಿತ್ರವನ್ನು ಆಕರ್ಷಕವಾಗಿ ರೂಪಿಸಿದ್ದರು. ಸ್ತಬ್ಧಚಿತ್ರಕ್ಕೆ ಹಿನ್ನೆಲೆ ಸಂಗೀತವನ್ನು ವಿ. ಮನೋಹರ್ ಅವರು ರಚಿಸಿ ಕೊಟ್ಟಿದ್ದಾರೆ.

ಕಂಸಾಳೆ, ಪೂಜಾ ಕುಣಿತ, ಪಟ ಕುಣಿತ, ಜಗ್ಗಲಗೆ, ದಾಸರ ಪದ, ನಂದಿ ಧ್ವಜ ಕುಣಿತಗಳಿಗೆ ರಾಜ್ಯದಿಂದ ಜಾನಪದ ಕಲಾವಿದರನ್ನು ಆಯ್ಕೆ ಮಾಡಲಾಗಿತ್ತು. ರಾಜ್ಯದ ಬೇರೆ ಬೇರೆ ಪ್ರದೇಶಗಳಿಂದ ಆಗಮಿಸಿದ್ದ ಕಲಾವಿದರು ದೆಹಲಿಯ ಕೊರೆಯುವ ಚಳಿಯನ್ನು ಲೆಕ್ಕಿಸದೇ ಶ್ರಮಪಟ್ಟು ತಾಲೀಮು ನಡೆಸಿ ಸ್ತಬ್ಧ ಚಿತ್ರದೊಂದಿಗೆ ಭಾಗವಹಿಸಿದರು ಎಂದು ನಿರ್ದೇಶಕ ವಿಶುಕುಮಾರ್ ವಿವರಣೆ ನೀಡಿದರು.

ಇಲಾಖೆಯ ಉಪ ನಿರ್ದೇಶಕರಾದ ಪಿ.ಎಸ್. ಗುರುಮೂರ್ತಿ, ಡಾ. ಗಿರೀಶ್ ಎಲ್.ಪಿ. ಅವರುಗಳು ಸ್ತಬ್ಧಚಿತ್ರದ ನಿರ್ಮಾಣದ ಉಸ್ತುವಾರಿ ವಹಿಸಿದ್ದರು. ಕಲಾವಿದರ ಉಸ್ತುವಾರಿಯನ್ನು ಅಮರೇಶ ಅವರು ವಹಿಸಿದ್ದರು. ಈ ಬಾರಿಯ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿದ್ದು ನಮ್ಮ ಜೀವನದ ಅವಿಸ್ಮರಣಿಯ ಸಂದರ್ಭ ಸರ್ಕಾರ ನಮ್ಮಂತ ಜಾನಪದ ಕಲಾವಿದರನ್ನು ಗುರುತಿಸಿ ಅವಕಾಶ ಮಾಡಿಕೊಟ್ಟಿರುವುದು ಸಂತಸ ತಂದಿದೆ ಎಂದು ಜಾನಪದ ಕಲಾ ಪ್ರಕಾರಗಳೊಂದಿಗೆ ಭಾಗವಹಿಸಿದ ಕಲಾವಿದರು ಅನಿಸಿಕೆ ಹಂಚಿ ಕೊಂಡರು. ಅ

**ಅಮರೇಶ್ ಎಚ್.**





ಕರ್ನಾಟಕ ಭವನದ ನಿವಾಸಿ ಆಯುಕ್ತ ಶ್ರೀ ಅತುಲ್ ಕುಮಾರ ತಿವಾರಿ ಅವರು ವೀಕ್ಷಣೆ




ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರೊಂದಿಗೆ ಕರ್ನಾಟಕ ಟ್ಯಾಬ್ಲೋ ಕಲಾವಿದರು




# ವಿಜಯಪುರದ ಸುಧೀರ್ ಫಡ್ನೀಸ್
## ಹೊರನಾಡಿನಲ್ಲಿ ವಿಶೇಷ ಸಾಧನೆ

ಕೇರಳದ ಕೊಝಿಕೋಡ್ ಜಿಲ್ಲೆಯ ಇರಿಂಗಲ್‌ದಲ್ಲಿ ಡಿಸೆಂಬರ್ 28 ರಿಂದ ಜನವರಿ 15, 2017ರವರೆಗೆ 15 ದಿನಗಳ ಕಾಲ ಸರ್ಗಾಲಯವು ನಡೆಸಿದ ಕರಕುಶಲ ಮೇಳದ ಬಾಟಿಕ್ ಮತ್ತು ಕರಕುಶಲ ಪ್ರದರ್ಶನದಲ್ಲಿ ಚಿತ್ರ ಕಲಾವಿದರಾದ ಸುಧೀರ್ ಫಡ್ನೀಸ್ ಅವರು ಭಾಗವಹಿಸಿದ್ದರು. ಈ ಮೇಳದಲ್ಲಿ ಭಾಗವಹಿಸಿದ್ದ 200 ಕರಕುಶಲ ಕಲಾವಿದರಲ್ಲಿ ಬಾಟಿಕ್ ಹಸ್ತ ಶಿಲ್ಪ ಕಲೆಯ ಪ್ರದರ್ಶನಕ್ಕಾಗಿ ಅತ್ಯುತ್ತಮ ಪ್ರಾತ್ಯಕ್ಷಿಕತೆ (ಡೆಮೊ) ಪ್ರಶಸ್ತಿಗೆ ಕೂಡಾ ಫಡ್ನೀಸ್ ಅವರು ಭಾಜನರಾಗಿದ್ದಾರೆ. ಅಲ್ಲದೇ ನಬಾರ್ಡ್ ಸಂಸ್ಥೆಯ ವಿಶೇಷ ಸನ್ಮಾನ ಸಹ ಅವರಿಗೆ ಸಂದಿದೆ.

ಸುಧೀರ್ ವಿ. ಫಡ್ನೀಸ್ ಅವರು ವಿಜಯಪುರದವರಾಗಿದ್ದು ಕಳೆದ 17 ವರ್ಷಗಳಿಂದ ದೆಹಲಿಯಲ್ಲಿ ನೆಲೆಸಿದ್ದಾರೆ. ಅವರು ಚಿತ್ರ ಕಲಾ ಪ್ರಕಾರಗಳಾದ ಬಾಟಿಕ್, ಕ್ಯಾನ್ವಾಸ್ ಮತ್ತು ನ್ಯೂರಲ್ ಇತ್ಯಾದಿ ಚಿತ್ರ ಕಲಾ ವಿಭಾಗಗಳಲ್ಲಿ ಪರಿಣತಿ ಹೊಂದಿರುತ್ತಾರೆ. ಅಷ್ಟೇ ಅಲ್ಲದೆ ಬಾಟಿಕ್ ಚಿತ್ರಕಲೆಯಲ್ಲಿನ ತಮ್ಮ ಅಸಾಧಾರಣ ಪ್ರತಿಭೆಗಾಗಿ 2008ರಲ್ಲಿ ನ್ಯಾಷನಲ್ ಮೆರಿಟ್ ಅವಾರ್ಡ್ ಸಹ ಇವರ ಮುಡಿಗೇರಿದೆ. ಹಲವಾರು ರಾಜ್ಯ ಮತ್ತು ಪ್ರಾದೇಶಿಕ ಮಟ್ಟದ ಹಾಗೂ ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಹಾಗೂ ಪ್ರಶಂಸಾ ಪತ್ರಗಳಿಂದ ಸನ್ಮಾನಿತರಾಗಿರುತ್ತಾರೆ. ಇವರು ರಾಜ್ಯ, ರಾಷ್ಟ್ರಮಟ್ಟಗಳಲ್ಲಿ ಅಷ್ಟೆ ಅಲ್ಲದೆ ವಿದೇಶಗಳಲ್ಲಿಯೂ ಸಹ ಬಾಟಿಕ್ ಚಿತ್ರಕಲೆಯ ಪ್ರದರ್ಶನ ಏರ್ಪಡಿಸಿ ವಿದೇಶಿಯರಿಗೂ ಸಹ ಬಾಟಿಕ್ ಪೇಂಟಿಂಗ್ ಕುರಿತು ಮಾಹಿತಿ ನೀಡಿದ್ದಾರೆ. 2012ರಲ್ಲಿ ಕೇಂದ್ರ ಸರ್ಕಾರದ ಜವಳಿ ಇಲಾಖೆ ವತಿಯಿಂದ ಆಯ್ಕೆಯಾಗಿ ಇರಾನ್ ರಾಜಧಾನಿಯಾದ ಥೆಹರಾನ್‌ನಲ್ಲಿ ಬಾಟಿಕ್ ಚಿತ್ರಕಲಾ ಮೇಳದಲ್ಲಿ ಭಾಗವಹಿಸಿದ್ದಾರೆ. ಇವರ ಪೇಂಟಿಂಗ್‌ಗಳು ಕನ್ನಡ ಚಲನಚಿತ್ರಗಳಲ್ಲೂ ಸಹ ಕಾಣಬಹುದು. ಅಮೃತವರ್ಷಿಣಿ ಚಲನಚಿತ್ರದಲ್ಲಿ ಇವರ ಕ್ಯಾನ್ವಾಸ್ ಪೇಂಟಿಂಗ್ ಬಳಸಿಕೊಳ್ಳಲಾಗಿದೆ.

ಫಡ್ನೀಸ್ ಅವರು ಕೇವಲ ಚಿತ್ರ ಕಲೆಯಲ್ಲಷ್ಟೆ ಅಲ್ಲದೇ ಸಂಗೀತದ ಗೀಳು ಹೊಂದಿದ್ದು ತಬಲಾ ವಾದಕರೂ ಸಹ ಆಗಿದ್ದಾರೆ. ವಿಶೇಷ ಸಂದರ್ಭಗಳಲ್ಲಿ ಅವರು ದೆಹಲಿಯಲ್ಲಿರುವ ಶ್ರೀ ರಾಘವೇಂದ್ರ ಮಠ ಮತ್ತು ಸಂಘ-ಸಂಸ್ಥೆಗಳಲ್ಲಿ ನಡೆಯುವ ಭಜನೆ, ಪ್ರಾರ್ಥನೆ ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾರೆ. ದೆಹಲಿ ಕರ್ನಾಟಕ ಸಂಘ ನಡೆಸುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸುಧೀರ್ ಫಡ್ನೀಸ್ ಅವರ ಕುಂಚ ಮತ್ತು ಕಲೆಯ ಸೇವೆ ಇದ್ದದ್ದೆ. ದೆಹಲಿಯಲ್ಲಿ ನಡೆಯುವ ಸಂಗೀತ ಕಾರ್ಯಕ್ರಮಗಳಲ್ಲಿ ಇವರು ಸ್ಥಳೀಯ ಕಲಾವಿದರಿಗೆ ತಬಲಾ ಸಾಥ್ ನೀಡುತ್ತಾರೆ. ದೆಹಲಿಯಲ್ಲಿ ಸ್ಥಳೀಯ ಕಲಾವಿದರಿಂದ ನಡೆಯುವ ನಾಟಕ ಪ್ರದರ್ಶನದಲ್ಲಿ ನಾಟಕಕ್ಕೆ ಬೇಕಾದ ಪರಿಕರಗಳನ್ನು ಸ್ವತಃ ತಯಾರಿಸಿ ನಾಟಕ ಅತ್ಯುತ್ತಮವಾಗಿ ಮೂಡಿ ಬರುವಂತೆ ಮಾಡುತ್ತಾರೆ. ಹತ್ತು ಹಲವು ದೇವರ ಚಿತ್ರಗಳನ್ನು ತಮ್ಮ ಕಲೆಯಿಂದ ಅರಳಿಸಿದ್ದಾರೆ. ಅಲ್ಲದೇ ತಮ್ಮ ಅಲಂಕರಾರಿಕ ರಂಗೋಲಿ ಬಿಡಿಸುವ ಕಲೆಯಿಂದ ಸಹ ಇವರು ದೆಹಲಿ ಕನ್ನಡಿಗರ ಮನೆ ಮಾತಾಗಿದ್ದಾರೆ. ಪ್ರತಿ ವರ್ಷ ದೆಹಲಿ ಕರ್ನಾಟಕ ಸಂಘ ಆಚರಿಸುವ ಗಣೇಶೋತ್ಸವ ಸಂದರ್ಭದಲ್ಲಿ ಗಣೇಶ ಮೂರ್ತಿಗೆ ವೈವಿಧ್ಯಮಯವಾಗಿ ಅತ್ಯಾಕರ್ಷಕವಾದ ಪೀಠಾಲಂಕಾರವನ್ನು ತಯಾರಿಸಿ ಆ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರನ್ನು ಆಕರ್ಷಿಸಿ ಭಕ್ತಿರಸದಲ್ಲಿ ಮುಳುಗಿಸುತ್ತಾರೆ.

ತುಂಬಾ ಕ್ರಿಯಾಶೀಲರಾಗಿದ್ದು ದಿನವಿಡೀ ತಮ್ಮನ್ನು ತಾವು ಹಲವಾರು ಕಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಫಡ್ನೀಸ್ ಅವರು ತಮ್ಮ ಬಿಡುವಿನ ಸಮಯದಲ್ಲಿ ಸಮಾಜ ಸೇವೆಯಲ್ಲಿಯೂ ಸಹ ತೊಡಗಿಕೊಳ್ಳುತ್ತಾ ತಮ್ಮ ತಾಯ್ನಾಡಿನಿಂದ ಬರುವ ಕನ್ನಡಿಗರಿಗೆ ಸದಾ ಸಹಾಯ ಹಸ್ತ ಚಾಚುವುದರಲ್ಲಿ ಸಿದ್ಧ ಹಸ್ತರು. ಈ ರೀತಿ ಬಹುಮುಖ ಪ್ರತಿಭೆಯುಳ್ಳ ಶ್ರೀ ಫಡ್ನೀಸ್ ಅವರು ಯಾವಾಗಲೂ ತಮ್ಮ ಹಸನ್ಮುಖಿ, ಮಿತಭಾಷಿ ಹಾಗು ನಿರಾಡಂಭರ ಜೀವನದಿಂದ ದೆಹಲಿ ಕನ್ನಡಿಗರ ಮನಗೆದ್ದು ಸ್ನೇಹಜೀವಿಯಾಗಿರುತ್ತಾರೆ. ದೆಹಲಿ ಕರ್ನಾಟಕ ಸಂಘದ ಸಕ್ರಿಯ ಸದಸ್ಯರಾಗಿರುವ ಶ್ರೀ ಸುಧೀರ್ ಫಡ್ನೀಸ್ ಅವರ ಈ ಸಾಧನೆಗಾಗಿ ದೆಹಲಿ ಕರ್ನಾಟಕ ಸಂಘವು ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತದೆ.

**ಹರಿಪ್ರಿಯ ಎಸ್**

# ದೆಹಲಿ ಕನ್ನಡ ಶಾಲೆಯಲ್ಲಿ ಗಣರಾಜ್ಯೋತ್ಸವ ದಿನಾಚರಣೆ

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ 68ನೇಯ 'ಗಣರಾಜ್ಯೋತ್ಸವ ದಿನಾಚರಣೆ'ಯನ್ನು ಜನವರಿ 26ರಂದು ಸಂಭ್ರಮದಿಂದ ಆಚರಿಸಲಾಯಿತು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ಆಶಾ ಕಾರ್ಯಪ್ಪ ಮತ್ತು ಶ್ರೀ ಕೆ. ಆರ್. ರಾಮಮೂರ್ತಿ ಅವರು ಧ್ವಜಾರೋಹಣ ನೆರವೇರಿಸಿದರು. ಬಳಿಕ ನೆರೆದವರೆಲ್ಲರೂ ರಾಷ್ಟ್ರಗೀತೆಯೊಂದಿಗೆ ರಾಷ್ಟ್ರಧ್ವಜಕ್ಕೆ ಗೌರವವನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಶ್ರೀ ರಾಮಮೂರ್ತಿ ಅವರು ಸ್ವಾತಂತ್ರ್ಯ ಹೋರಾಟದಿಂದ ಹಿಡಿದು ಮೊದಲ ಗಣರಾಜ್ಯೋತ್ಸವ ಆಚರಣೆಯವರೆಗೆ ನಡೆದ ಘಟನಾವಳಿಗಳನ್ನು ವಿಸ್ತ್ರುತವಾಗಿ ಹೇಳುತ್ತಾ ಗಣರಾಜ್ಯೋತ್ಸವದ ಮಹತ್ವದ ಬಗ್ಗೆ ಒತ್ತಿ ಹೇಳಿದರು. ಕಾರ್ಯಕ್ರಮಕ್ಕೆ ಆಗಮಿಸಿದಂತಹ ಎಲ್ಲಾ ಅತಿಥಿಗಳನ್ನು, ಪೋಷಕರನ್ನು, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರನ್ನು ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್ ಅವರು ಸ್ವಾಗತಿಸಿದರು. ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ದೇಶಭಕ್ತಿಯನ್ನು ಮೂಡಿಸುವಂತಹ ವರ್ಣರಂಜಿತ ಕಾರ್ಯಕ್ರಮಗಳು, ಗಣರಾಜ್ಯೋತ್ಸವ ಹಾಗೂ ಸಂವಿಧಾನದ ಮಹತ್ವದ ಬಗ್ಗೆ ಭಾಷಣ, ಸ್ವಾತಂತ್ರ್ಯ ಹೋರಾಟಗಾರರ ಕುರಿತಾದ ಪಾತ್ರಾಭಿನಯ ಜೊತೆಗೆ ಸುಶ್ರಾವ್ಯವಾದ ದೇಶಭಕ್ತಿಗೀತೆಯು ಪ್ರಸ್ತುತಗೊಂಡಿತು. ಆರಂಭದಲ್ಲಿ ಎನ್.ಸಿ.ಸಿ. ಅವರ ಆಕರ್ಷಕ ಪಥಸಂಚಲನ ನಡೆಯಿತು.

**ಅರವಿಂದ ಬಿಜ್ಜೈ**



## ವಸಂತ ಶೆಟ್ಟಿ ಬೆಳ್ಳಾರೆ ಅವರಿಗೆ

## ಅಭಿನಂದನೆ

# 'ಅರಾಟೆ ನಾಗಮ್ಮ ಶೇಷಪ್ಪ ಪೂಜಾರಿ ಸ್ಮಾರಕ' ಪ್ರಶಸ್ತಿ



ತುಳು ಮಾತೃ ಭಾಷಿಗರು ಹೊರನಾಡಿನಲ್ಲಿ ಕನ್ನಡ ಸಂಘಟನೆಯಲ್ಲಿ ತೊಡಗಿಕೊಂಡು ಉತ್ತಮ ಸೇವೆ ಸಲ್ಲಿಸಿದವರಿಗೆ ನೀಡಲಾಗುವ ಮುಂಬೈಯ ಚೆಂಬೂರು ಕರ್ನಾಟಕ ಸಂಘದ ಈ ವರ್ಷದ 'ಅರಾಟೆ ನಾಗಮ್ಮ ಶೇಷಪ್ಪ ಪೂಜಾರಿ ಸ್ಮಾರಕ' ಪ್ರಶಸ್ತಿಯನ್ನು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಜಸ್ಟೀಸ್ ಡಾ. ಶಿವರಾಜ ಪಾಟೀಲ್ ಅವರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರಿಗೆ ಪ್ರದಾನ ಮಾಡಿದರು. ಈ ಪ್ರಶಸ್ತಿಯು ರೂ. 30,000/- ನಗದು, ಸ್ಮರಣಿಕೆ ಮತ್ತು ವಿಮಾನಯಾನ ವೆಚ್ಚವನ್ನು ಒಳಗೊಂಡಿದೆ. ವಸಂತ ಶೆಟ್ಟಿ ಬೆಳ್ಳಾರೆಯವರು ಕಳೆದ ಮೂರು ದಶಕಕ್ಕೂ ಮಿಕ್ಕಿ ದೆಹಲಿಯ ಕನ್ನಡ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ. ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆ ಮತ್ತು ಸಂಘದ ಮುಂಭಾಗದಲ್ಲಿರುವ ಮೆಟ್ರೋ ನಿಲ್ದಾಣಕ್ಕೆ ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯ ಅವರ ಹೆಸರು ಇವರ ಅಧ್ಯಕ್ಷತೆಯ ಅವಧಿಯಲ್ಲಿ ಸಂಘದ ಪ್ರಯತ್ನದಿಂದ ಆಗಿದೆ.

ಚೆಂಬೂರು ಕರ್ನಾಟಕ ಸಂಘದ 'ಸಾಹಿತ್ಯ ಸಹವಾಸ-2017' ಕಾರ್ಯಕ್ರಮದಲ್ಲಿ ಗೌರವಾನ್ವಿತ ಅತಿಥಿಯಾಗಿ ಬೆಂಗಳೂರು ದೂರದರ್ಶನ ಕೇಂದ್ರ, ದಕ್ಷಿಣ ವಿಭಾಗದ ಹೆಚ್ಚುವರಿ ನಿರ್ದೇಶಕ ಡಾ. ನಾಡೋಜ ಮಹೇಶ್ ಜೋಷಿ ಪಾಲ್ಗೊಂಡಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ, ನ್ಯಾಯವಾದಿ ಶ್ರೀ ಎಚ್.ಕೆ. ಸುಧಾಕರ ಅರಾಟೆ ವಹಿಸಿದ್ದರು. ಅ

***ಅಭಿಮತ ವರದಿ***

## ಬೀಳ್ಕೊಡುಗೆ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ದೆಹಲಿ ಪೋಲಿಸ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಆರ್.ಎ. ವೆಂಕಟೇಶ್ ಉದ್ಯೋಗ ನಿಮಿತ್ತ ಬೆಂಗಳೂರಿಗೆ ವರ್ಗಾಣೆಗೊಂಡು ಹೋಗುತ್ತಿರುವ ಸಂದರ್ಭದಲ್ಲಿ ಇದೇ ಜನವರಿ 29ರಂದು ನಡೆದ ಸಮಾರಂಭದಲ್ಲಿ ಅವರನ್ನು ಸಂಘದ ಪರವಾಗಿ ಆತ್ಮೀಯವಾಗಿ ಅಭಿನಂದಿಸಿ ಬೀಳ್ಕೊಡುತ್ತಿರುವುದು.

# 'ಕಣಜ' ವೆಬ್ ಪೋರ್ಟಲ್ ಪ್ರಾತ್ಯಕ್ಷಿಕೆ



ಇದೇ ಜನವರಿ 8ರಂದು ಕನ್ನಡ ಮತ್ತು ಸಂಸ್ಕೃತಿ ಬೆಂಗಳೂರು ವತಿಯಿಂದ ಕಣಜ ಅಂತರ್ಜಾಲ ಕನ್ನಡ ಜ್ಞಾನಕೋಶದ ಸಂಪನ್ಮೂಲ ಸಮಾಲೋಚಕರಾದ ಶ್ರೀ ಜಗನ್ನಾಥ್ ಪ್ರಕಾಶ್, ಶ್ರೀ ಟಿ.ಜಿ. ಶ್ರೀನಿಧಿ ಮತ್ತು ಸಮನ್ವಕಾರ ಶ್ರೀ ಕೆ.ವಿ. ರಾಧಾಕೃಷ್ಣ ಹಾಗೂ ಶ್ರೀ ನಂದೀಶ್ ನಾಲ್ಕು ಮಂದಿ ಹಿರಿಯ ಅಧಿಕಾರಿಗಳು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ನೆರೆದಿದ್ದ ನೂರಾರು ಮಂದಿ ದೆಹಲಿ ಕನ್ನಡಿಗರಿಗೆ 'ಕಣಜ' ಅಂತರ್ಜಾಲದ ಕುರಿತಾಗಿ ಸವಿವರವಾಗಿ ಪ್ರಾತ್ಯಕ್ಷಿತೆಯೊಂದಿಗೆ ಸುಮಾರು ಎರಡು ಗಂಟೆಗಳ ಕಾಲ ವಿಚಾರ ವಿನಿಮಯ ನಡೆಸಿದರು.

ಕಣಜ ಅಂತರ್ಜಾಲ ಜ್ಞಾನಕೋಶವನ್ನು 2010ರಲ್ಲಿ ಕರ್ನಾಟಕ ಜ್ಞಾನ ಆಯೋಗದ ಪರಿಕಲ್ಪನೆಯಂತೆ ರೂಪಿಸಲಾಗಿತ್ತು. ತದನಂತರ 2015ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಣಜವನ್ನು ತನ್ನ ಅಧೀನದಲ್ಲಿ ಕ್ರಿಯಾಶೀಲವಾಗಿ ಅತ್ಯಂತ ಪರಿಣಾಮಕಾರಿಯಾಗಿ ರೂಪಿಸಿ ಜಗತ್ತಿನಲ್ಲಿರುವ ಎಲ್ಲಾ ಕನ್ನಡಿಗರಿಗೆ ಕನ್ನಡದ ಜ್ಞಾನವನ್ನು ಒದಗಿಸುವ ಕಾರ್ಯ ನಿರ್ವಹಿಸುತ್ತಿದೆ. ವಿಶ್ವದ ಎಲ್ಲಾ ಜ್ಞಾನ ಪ್ರಕಾರಗಳನ್ನು ಕನ್ನಡ ಭಾಷೆಯಲ್ಲಿ ಒದಗಿಸಿಕೊಡುವುದೇ ಕಣಜದ ಮೂಲ ಉದ್ದೇಶವಾಗಿದೆ. ಈ ಜ್ಞಾನ ಭಂಡಾರವನ್ನು ಅಂತರ್ಜಾಲ ಸಂಪರ್ಕ ಇರುವ ಯಾವುದೇ ಮೊಬೈಲ್ ಅಥವಾ ಕಂಪ್ಯೂಟರ್ ಮೂಲಕ www.kanaja.in ವಿಳಾಸದ ಮೂಲಕ ಈ ಜ್ಞಾನಕೋಶವನ್ನು ಪ್ರವೇಶಿಸಬಹುದಾಗಿದೆ.

ಕಣಜವು ಪಠ್ಯಮಾದರಿ ಲೇಖನಗಳು ಅಂಕಣಗಳು, ಧ್ವನಿ, ಚಿತ್ರ, ವ್ಯಕ್ತಿಚಿತ್ರಗಳು, ಮಕ್ಕಳ ಕಣಜ, QR ಕಣಜ, e ದಿನ, ಕನ್ನಡ ಸಾಂಸ್ಕೃತಿಕ ಲೋಕದ ಹೆಸರಾಂತ ಹಿರಿಯರಿಂದ 'ನನ್ನ ಜೀವನ ದೃಷ್ಟಿ', ಸ್ವಹಸ್ತ ಲೇಖದಲ್ಲಿ ಅಂಚೆ ಪತ್ರಗಳು ಮತ್ತು ವಿಡೀಯೋ ದೃಶ್ಯಾವಳಿ ಇರುವ ಒಂದು ಬಹುಮಾಧ್ಯಮ ಜ್ಞಾನಕೋಶವಾಗಿದೆ. ಇದರಲ್ಲಿ ಬರುವ ಅಂಕಣ ವಿಭಾಗಗಳಲ್ಲಿ ವಿವಿಧ ವಿಷಯಗಳ ಬಗ್ಗೆ ಆಯಾ ವಿಷಯ ಕ್ಷೇತ್ರ ತಜ್ಞರು ತಮ್ಮ ಬರವಣಿಗೆಯನ್ನು ಮಾಡುತ್ತಿದ್ದು, ವಿವಿಧ ಇಲಾಖೆ/ ಅಕಾಡೆಮಿಗಳ ನಿಯತಕಾಲಿಕೆಗಳನ್ನು ಸಹ ಕಣಜದಲ್ಲಿ ಪ್ರಕಟಿಸಲಾಗುತ್ತಿದೆ. ಇಷ್ಟೇ ಅಲ್ಲದೆ ವಿಷಯ ಪರಿಣಿತಿ ಇರುವ ಯಾರೊಬ್ಬರೂ ಕೂಡ ಕನ್ನಡದಲ್ಲಿ ತಮ್ಮ ಲೇಖನಗಳನ್ನು ಬರೆಯಬಹುದಾಗಿದೆ. ಜ್ಞಾನಪ್ರಸಾರದ ವಿಷಯ ವಸ್ತುಗಳ ಬಗ್ಗೆ ಮಾತ್ರ ಕಣಜ ಸದ್ಯಕ್ಕೆ ಪ್ರಾಶಸ್ತ್ಯ ನೀಡುತ್ತಿದೆ. ವಿವಿಧ ವಿಷಯ ವಸ್ತುಗಳ ಬಗ್ಗೆ ಜ್ಞಾನವುಳ್ಳ ಆಸಕ್ತರು ಹೆಚ್ಚಿನ ವಿವರಗಳಿಗಾಗಿ projectmanager@kanaja.in ಸಂಪರ್ಕಿಸಬಹುದಾಗಿದೆ ಶ್ರೀ ಕೆ.ವಿ. ರಾಧಾಕೃಷ್ಣ ಅವರು ತಿಳಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಕನ್ನಡ ಮತ್ತು ಸಂಸ್ಕೃತಿಯ ಕಣಜ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡ ಭಾಷೆ ಮತ್ತು ಜ್ಞಾನದ ಅಭಿವೃದ್ಧಿ ಮತ್ತು ವಿಸ್ತರಣೆಗಾಗಿ ಮಾಡುತ್ತಿರುವ ಒಂದು ಬಹುದೊಡ್ಡ ಶ್ಲಾಘನೀಯ ಕಾರ್ಯವಾಗಿದೆ ಎಂದು ನುಡಿದರು. ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಶ್ರೀ ದಯಾನಂದ ಅವರು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆ ಮತ್ತು ಪ್ರಚಾರಕ್ಕಾಗಿ ಅಸಧಾರಣ ಸೇವೆ ಮಾಡುತ್ತಿದ್ದಾರೆ, ಈ ಕಣಜವು ಕನ್ನಡಿಗರೆಲ್ಲರಿಗೂ ಅದರಲ್ಲೂ ಮುಖ್ಯವಾಗಿ ಹೊರನಾಡಿನಲ್ಲಿರುವ ನಮ್ಮಂತಹ ಕನ್ನಡಿಗರಿಗೆ ವರದಾನವಾಗಿದೆ ಎಂದರು. ಕಣಜ ಈ ನಿಟ್ಟಿನಲ್ಲಿ ಒಂದು ಬಹುದೊಡ್ಡ ಪ್ರಶಂಸನೀಯ ಕಾರ್ಯವಾಗಿದೆ ಎಂದು ಅಭಿಪ್ರಾಯಪಟ್ಟರು. ಸಭೆಯಲ್ಲಿ ಹಾಜರಿದ್ದ ಶ್ರೀ ನರಸಿಂಹ ಮೂರ್ತಿ, ಶ್ರೀ ಚೆನ್ನು ಎಸ್. ಮಠದ, ಶ್ರೀ ಸಖಾರಾಮ ಉಪ್ಪೂರು, ಡಾ. ಅಹಲ್ಯಾಚಿಂತಾಮಣಿ ಹಾಗೂ ಇನ್ನೂ ಹಲವಾರು ಮಂದಿ ಕಣಜ ಅಧಿಕಾರಿಗಳೊಡನೆ ಚರ್ಚಿಸಿ ಹಲವಾರು ವಿಷಯಗಳನ್ನು ತಿಳಿದುಕೊಂಡರು. ಅ

***ಸಖಾರಾಮ ಉಪ್ಪೂರು***

Delhi Karnataka Sangha Abhimatha Monthly,
Feb-2017, Vol. No.27, Issue No.5, Price Rs.1/- RNI Regn. No. 53405/91, DL-SW-1/4016/16-18
Printout Date : Feb 8th / 9th, Postal Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

# ಕೈರುಚಿ ಆಹಾರ ಮೇಳ-ಬಹುಮಾನ ವಿಜೇತರು







